ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್

ಚೇತನ ಎಜುಕೇಷನ್ ಟ್ರಸ್ಟ್ (ನೋಂ) -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ಪಿಯುಸಿ) ಮತ್ತು ಇತರರು

ರಿಟ್ ಅಪೀಲುಸಂಖ್ಯೆ: 2025/2015 (ಇಡಿಎನ್-ಆರ್‌ಇಜಿ-ಪಿ),ದಿನಾಂಕ: 28 ನೇ ನವೆಂಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್

ಅಪೀಲುದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ವಜಾಗೊಳಿಸಿ ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು ಹೊರಡಿಸಿದದಿನಾಂಕ: 07 ನೇ ಜುಲೈ, 2015 ರ ಪ್ರಶ್ನಿತ ತೀರ್ಪು ಮತ್ತು ಆದೇಶ ಕಾರಣ ಮೇಲಿನ ಅಪೀಲು ಉದ್ಭವಿಸಿದೆ.

2. ಮೇಲಿನ ಅಪೀಲು ಉದ್ಭವಿಸಲು ನೀಡಿದ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿವೆ:

ಅಪೀಲುದಾರರು ತಾವು ಕರ್ನಾಟಕ ರಾಜ್ಯದ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾದ ಶಿಕ್ಷಣ ಟ್ರಸ್ಟ್ ಎಂದು ಕ್ಲೇಮು ಮಾಡಿಕೊಂಡಿದ್ದಾರೆ.ಪ್ರಾಥಮಿಕ, ಮಾಧ್ಯಮಿಕ ಮತ್ತು ಕೊಲಿಜಿಯೇಟ್ ಶಿಕ್ಷಣವನ್ನು ನೀಡುವ ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ, ಅಪೀಲುದಾರರು ದಾವಣಗೆರೆ ಮತ್ತು ಕರ್ನಾಟಕದ ಇತರ ಸ್ಥಳಗಳಲ್ಲಿ 13 ಪದವಿ-ಪೂರ್ವ ಕಾಲೇಜುಗಳನ್ನು ಸಹ ಸ್ಥಾಪಿಸಿದ್ದಾರೆ.ಸಂಬಂಧಪಟ್ಟ ಪ್ರಾಧಿಕಾರಗಳಿಂದ ಸೂಕ್ತ ಮಾನ್ಯತೆಯನ್ನು ಮತ್ತು ಅನುಮತಿಯನ್ನು ಪಡೆದ ನಂತರ, ಅಪೀಲುದಾರರು ಪದವಿ-ಪೂರ್ವ ಕಾಲೇಜುಗಳನ್ನು ಸ್ಥಾಪಿಸಿರುವರು ಎಂದು ವಾದಿಸಲಾಗಿದೆ.

3. ಈ ಮುಂದಿನ ಪರಿಹಾರಗಳನ್ನು ಕೋರಿ ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರ ಮುಂದೆ ಅಪೀಲುದಾರರು ಅರ್ಜಿಯನ್ನು ಸಲ್ಲಿಸಿದ್ದಾರೆ:

ಎ) ಕರ್ನಾಟಕ ಪದವಿ-ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ, ಇತ್ಯಾದಿ) ನಿಯಮಗಳು, 2006 ರ 4 ( 2) ( ಎ) ನಿಯಮವನ್ನು ಅಸಂವಿಧಾನಿಕವೆಂದು ಹಾಗೂ ಭಾರತ ಸಂವಿಧಾನ ಮತ್ತು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ ಉಲ್ಲಂಘನೆಯೆಂದು ಘೋಷಿಸುವುದು:ಅನುಬಂಧ-ಜಿ;

ಬಿ) ಮೂರನೇ ಎದುರುದಾರ ಪ್ರಾಧಿಕಾರವು ಹೊರಡಿಸಿದಸಂಖ್ಯೆ: ಪಪೂಶಿ/ಸಿಬ್ಬಂದಿ -3/ಜಿಡಿ/ಆರ್‌ಇ.ಎಮ್ -28093/2012-9117/2012/2012-13, ಬೆಂಗಳೂರು,ದಿನಾಂಕ: 30.06.2015 ನ್ನು ಹೊಂದಿರುವ ಅನುಬಂಧ-ಹೆಚ್ನಲ್ಲಿರುವದಿನಾಂಕ: 03.07.2015 ರ ಆದೇಶವನ್ನು ರದ್ದುಗೊಳಿಸಿ, ಷರ್ಷಿಯೋರರಿ ಸ್ವರೂಪದಲ್ಲಿನ ರಿಟ್‌ಅನ್ನು ಅಥವಾ ಅಂತಹುದೇ ಸ್ವರೂಪದಲ್ಲಿನ ಯಾವುದೇ ಇತರ ರಿಟ್ ಅಥವಾ ಆದೇಶ ಅಥವಾ ನಿರ್ದೇಶನವನ್ನು ನೀಡುವುದು;

ಸಿ) ಅರ್ಜಿದಾರ ಟ್ರಸ್ಟ್ ನಡೆಸುವ ಪದವಿ-ಪೂರ್ವ ಕಾಲೇಜುಗಳ ಪರವಾಗಿ ನೀಡಿದ ಮಾನ್ಯತೆಯನ್ನು ಅಂಗೀಕರಿಸಲು ಮತ್ತು ನವೀಕರಿಸಲು ಎದುರುದಾರ ಪ್ರಾಧಿಕಾರಗಳಿಗೆ ನಿರ್ದೇಶಿಸಿ ಮ್ಯಾಂಡವೆಸ್ ಸ್ವರೂಪದಲ್ಲಿ ರಿಟ್ ಅಥವಾ ಅಂತಹುದೇ ಸ್ವರೂಪದಲ್ಲಿ ಯಾವುದೇ ಇತರ ರಿಟ್ ಅಥವಾ ಆದೇಶ ಮತ್ತು ನಿರ್ದೇಶನವನ್ನು ನೀಡುವುದು;

ಡಿ) ನ್ಯಾಯ ಮತ್ತು ವಿಶೇಷ ನ್ಯಾಯದ ಹಿತಾಸಕ್ತಿಯಿಂದ, ಮೊಕದ್ದಮೆಯ ಸಂಗತಿಗಳ ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಈ ಮಾನ್ಯ ನ್ಯಾಯಾಲಯವು ನೀಡಲು ಸೂಕ್ತವೆಂದು ಭಾವಿಸಬಹುದಾದಂಥ ಇತರ ಪರಿಹಾರ ಅಥವಾ ಪರಿಹಾರಗಳನ್ನು ನೀಡುವುದು.

4. ರಿಟ್ ಅರ್ಜಿಯಲ್ಲಿನ ಮನವಿ ( ಎ) ಯಲ್ಲಿ, ಅಪೀಲುದಾರರು, ಕರ್ನಾಟಕ ಪದವಿ-ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ, ಇತ್ಯಾದಿ) ನಿಯಮಗಳು, 2006 ರ (ಸಂಕ್ಷಿಪ್ತವಾಗಿ ' 2006 ರ ಸದರಿ ನಿಯಮಗಳು) 4 ( 2) ( ಎ) ನಿಯಮವನ್ನು ಅಸಂವಿಧಾನಿಕವೆಂದು ಹಾಗೂ ಭಾರತ ಸಂವಿಧಾನ ಮತ್ತು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ ಉಲ್ಲಂಘನೆಯೆಂದು ಘೋಷಿಸುವಂತೆ ಕೋರಿದ್ದಾರೆ.ಈ ಸಂದರ್ಭದಲ್ಲಿ,ದಿನಾಂಕ: 03.07.2015 ರ ಪ್ರಶ್ನಿತ ಆದೇಶದ (ರಿಟ್ ಅರ್ಜಿಯೊಂದಿಗೆ ಲಗತ್ತಿಸಿದ ಅನುಬಂಧ-ಹೆಚ್) ಮೂಲಕ, 3 ನೇ ಎದುರುದಾರರು, 2006 ರ ಸದರಿ ನಿಯಮಗಳ 4 ( 2) ( ಎ) ನಿಯಮದಲ್ಲಿ ಪರ್ಯಾಲೋಚಿಸಿದಂತೆ 25,000 ಚದರ ಅಡಿ ಭೂಮಿಯನ್ನು ಆರ್ಜಿಸುವ ಕಡ್ಡಾಯ ಅಗತ್ಯತೆಯನ್ನು ಅಪೀಲುದಾರರು ಪಾಲಿಸಿಲ್ಲವೆಂಬ ಕಾರಣದ ಮೇಲೆ ಅವರ ಹೆಸರಿಗೆ ನೀಡಿದ ಮಾನ್ಯತೆಯನ್ನು ಹಿಂಪಡೆದಿದ್ದಾರೆ ಎಂದು ಹೇಳುವುದು ಸುಸ ಂ ಗತವಾಗಿದೆ.ಮನವಿ ' ಬಿ ' ಮೂಲಕ,ದಿನಾಂಕ: 03.07.2015 ರ ಅನುಬಂಧ-ಹೆಚ್ನಲ್ಲಿರುವ ಮೇಲೆ ಹೇಳಿದ ಆದೇಶವನ್ನು ರದ್ದುಗೊಳಿಸುವಂತೆ ಅಪೀಲುದಾರರು ಕೋರಿದ್ದಾರೆ.ಮನವಿ ' ಸಿ'ಯಲ್ಲಿ, ಅಪೀಲುದಾರರು ನಡೆಸುತ್ತಿರುವ ಮೇಲೆ ಹೇಳಿದ ಪದವಿ-ಪೂರ್ವ ಕಾಲೇಜುಗಳ ಹೆಸರಿಗೆ ನೀಡಿದ ಮಾನ್ಯತೆಯನ್ನು ಮಂಜೂರು ಮಾಡಲು ಮತ್ತು ನವೀಕರಿಸಲು ಪ್ರಾಧಿಕಾರಗಳಿಗೆ ಆನುಷಂಗಿಕ ನಿರ್ದೇಶನ ನೀಡುವಂತೆ ಅಪೀಲುದಾರರು ಕೋರಿದ್ದಾರೆ.

5. ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ, ಮಾನ್ಯ ಏಕಪೀಠ ನ್ಯಾಯಾಧೀಶರು, 4 ( 2) ( ಎ) ನೇ ನಿಯಮವು ತಾರತಮ್ಯಕರವಾಗಿಲ್ಲ ಅಥವಾ ನಿರಂಕುಶವಾಗಿಲ್ಲ ಹಾಗೂ ಸಹಜವಾಗಿಯೇ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗದಿರುವ 25,000 ಚದರ ಅಡಿಗಳಿಗಿಂತ ಕಡಿಮೆ ಭೂಮಿಯ ಸಣ್ಣ ಭಾಗದಲ್ಲಿ ಪದವಿ-ಪೂರ್ವ ಕಾಲೇಜುಗಳನ್ನು ನಡೆಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿರಲಿಲ್ಲವೆಂಬ ಸಂಗತಿಯನ್ನು ಗಮನದಲ್ಲಿರಿಸಿಕೊಂಡು, ನಿಯಮವು ಅತ್ಯಂತ ಸೂಕ್ತವಾದುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.ಅಲ್ಲದೆ ಮಾನ್ಯ ಏಕಪೀಠ ನ್ಯಾಯಾಧೀಶರು, ಅದನ್ನು ಬಿಟ್ಟುಬಿಡುವ ಹಾಗೆ 4 ( 2) ( ಎ) ನಿಯಮವು ಯಾವುದೇ ಸಾಂವಿಧಾನಿಕ ಉಪಬಂಧವನ್ನು ಅಥವಾ ಪರಿಮಿತಿಗಳನ್ನು ಉಲ್ಲಂಘಿಸುವುದಿಲ್ಲ ಹಾಗೂ ಸದರಿ ನಿಯಮವು ಕರ್ನಾಟಕ ಶಿಕ್ಷಣ ಅಧಿನಿಯಮ, 1993 ರ ಯಾವುದೇ ಉಪಬಂಧಕ್ಕೆ ಸಹ ವಿರುದ್ಧವಾಗಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು, ಅನುಬಂಧ-ಹೆಚ್ನಲ್ಲಿರುವ ಪ್ರಶ್ನಿತ ಆದೇಶವು, ಮೊಕದ್ದಮೆಯಲ್ಲಿನ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿ, ಅಧಿನಿಯಮದ 39 ( 2) ನೇ ಪ್ರಕರಣಕ್ಕೆ ವಿರುದ್ಧವಾಗಿದೆ ಎಂದು ವಾದಿಸಿರುವ ಅಪೀಲುದಾರರ ವಾದಕ್ಕೆ ಪ್ರತಿಕೂಲವಾಗಿರುವುದಿಲ್ಲವೆಂದು ಸಹ ಅಭಿಪ್ರಾಯಪಟ್ಟಿದ್ದಾರೆ.ಈ ಸಂದರ್ಭಗಳ ಮೇರೆಗೆ, ಮಾನ್ಯ ಏಕಪೀಠ ನ್ಯಾಯಾಧೀಶರು, ಭಾರತ ಸಂವಿಧಾನದ

226 ನೇ ಮತ್ತು 227 ನೇ ಅನುಚ್ಛೇದಗಳ ಅಡಿಯಲ್ಲಿ ಈ ನ್ಯಾಯಾಲಯದ ವಿಶೇಷ ಅಧಿಕಾರವ್ಯಾಪ್ತಿಯ ಅಡಿಯಲ್ಲಿ ಹಸ್ತಕ್ಷೇಪವನ್ನು ಸಮರ್ಥಿಸಲು ಅಪೀಲುದಾರರು ಸಲ್ಲಿಸಿದ ಅರ್ಜಿಯು ಸೂಕ್ತವಾದ ಪ್ರಕರಣವಾಗಿರಲಿಲ್ಲವೆಂಬ ನಿರ್ಣಯಕ್ಕೆ ಬಂದು, ತದನುಸಾರವಾಗಿ, ಅವರು ಅರ್ಜಿಯನ್ನು ವಜಾಗೊಳಿಸಿದ್ದಾರೆ.ಆದ್ದರಿಂದ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿದೆ.

6. ಅಪೀಲುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳ ಹಾಗೂ ಎದುರುದಾರರ ಪರ ಹಾಜರಾದ ಮಾನ್ಯ ಸಹಾಯಕ ಸರ್ಕಾರಿ ನ್ಯಾಯವಾದಿಗಳ ಅಹವಾಲುಗಳನ್ನು ನಾವು ಆಲಿಸಿದ್ದೇವೆ.

7. ಅಪೀಲುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ಮೇಲೆ ಹೇಳಿದ 4 ( 2) ( ಎ) ನಿಯಮವು ಅವೈಜ್ಞಾನಿಕ, ಅತಾರ್ಕಿಕ, ನಿರಂಕುಶ, ಅಕಾರಣವಾದುದು ಮತ್ತು ಭಾರತ ಸಂವಿಧಾನದ 14 ನೇ, 19 ನೇ ಮತ್ತು 21 ನೇ ಅನುಚ್ಛೇದಗಳಿಗೆ ವಿರುದ್ಧವಾದುದು ಆಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳ ಮೇರೆಗೆ, 25,000 ಚದರ ಅಡಿಗಳ ಭೂಮಿಯನ್ನು ಒದಗಿಸುವ ಕಡ್ಡಾಯ ಅಗತ್ಯತೆಯು ಕಂಡುಬರುವುದಿಲ್ಲವಾದ್ದರಿಂದ, 4 ( 2) ( ಎ) ನಿಯಮವು ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿದೆ ಎಂದು ಅವರು ವಾದಿಸಿದ್ದಾರೆ.ಈ ಹಿನ್ನೆಲೆಯಲ್ಲಿ, 25,000 ಚದರ ಅಡಿಗಳ ಭೂಮಿಯನ್ನು ಗೊತ್ತುಪಡಿಸಿರುವ 2006 ರ ಸದರಿ ನಿಯಮಗಳ 4 ( 2) ( ಎ) ನಿಯಮವು, ಅಧಿನಿಯಮದ ಅಡಿಯಲ್ಲಿ ಸಾಧಿಸಬೇಕೆಂದಿರುವ ಉದ್ದೇಶದೊಂದಿಗೆ ಯಾವುದೇ ಸೂಕ್ತ ಸುಸಂಗತತೆ ಅಥವಾ ಸಂಬಂಧವನ್ನು ಹೊಂದಿಲ್ಲವೆಂದು ಮತ್ತು ಬಿಟ್ಟುಬಿಡುವುದಕ್ಕೆ ಯೋಗ್ಯವಾಗಿದೆ ಎಂದು ಅವರು ವಾದಿಸಿದ್ದಾರೆ.

8.ದಿನಾಂಕ: 03.07.2015 ರ ಅನುಬಂಧ-ಹೆಚ್ನಲ್ಲಿರುವ ಪಶ್ನಿತ ಆದೇಶವನ್ನು ಪ್ರಶ್ನಿಸುವುದಕ್ಕೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಅದು ಪ್ರಶ್ನಿತ ಆದೇಶವನ್ನು ಹೊರಡಿಸಿದ ಪ್ರಾಧಿಕಾರಗಳ ಮುಂದೆ ವಿಚಾರಣೆಯನ್ನು ನಡೆಸಿರಲಿಲ್ಲ ಅಥವಾ ಅಪೀಲುದಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಒದಗಿಸಿರಲಿಲ್ಲ ಎಂಬಷ್ಟರಮಟ್ಟಿಗೆ ಸಹಜ ನ್ಯಾಯ ತತ್ವಗಳನ್ನು ಉಲ್ಲಂಘಿಸಲಾಗಿದ್ದು, ಈ ಕಾರಣದ ಮೇಲೆಯೇ ಅದು ತಳ್ಳಿಹಾಕುವುದಕ್ಕೆ ಯೋಗ್ಯವಾಗಿತ್ತು ಎಂದು ವಾದಿಸಲಾಗಿದೆ.

9. ಇದಕ್ಕೆ ಪರಾಯವಾಗಿ, ನಿಯಮಗಳ 4 ( 3) ನೇ ನಿಯಮದ ಅಭಿಪ್ರಾಯದಲ್ಲಿ, ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಪದವಿ-ಪೂರ್ವ ಕಾಲೇಜುಗಳಿಗೆ 2006 ರ ಸದರಿ ನಿಯಮಗಳ 4 ( 2) ( ಎ) ನಿಯಮವು ಅನ್ವಯವಾಗುವುದಿಲ್ಲವೆಂದು ಅಪೀಲುದಾರರ ಪರವಾಗಿ ವಾದಿಸಲಾಗಿತ್ತು.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, 4 ( 2) ನೇ ನಿಯಮದ ಅಡಿಯಲ್ಲಿ ಉಪಬಂಧಿಸಿದ ವಿವಿಧ ಅಗತ್ಯತೆಗಳು, ಪದವಿ-ಪೂರ್ವ ಕಾಲೇಜು ಕನಿಷ್ಠಪಕ್ಷ ಆರು ವಿಭಾಗಗಳನ್ನು ಒಳಗೊಂಡಿದ್ದರೆ ಮಾತ್ರವೇ ಅನ್ವಯವಾಗುತ್ತದೆ, 4 ( 2) ನೇ ನಿಯಮವು ಯಾವುದೇ ಅನ್ವಯತೆಯನ್ನು ಹೊಂದಿರುವುದಿಲ್ಲ ಮತ್ತು ತತ್ಪರಿಣಾಮವಾಗಿ, ಸದರಿ ಅಗತ್ಯತೆಗಳು ಆರಕ್ಕಿಂತ ಕಡಿಮೆ ವಿಭಾಗಗಳನ್ನು ಒಳಗೊಂಡಿರುವ ಕಾಲೇಜಿಗೆ ಅನ್ವಯವಾಗುವುದಿಲ್ಲ.ಈ ಸಂದರ್ಭಗಳ ಮೇರೆಗೆ, 4 ( 2) ( ಎ) ನಿಯಮವನ್ನು ಈ ನ್ಯಾಯಾಲಯವು ಬಿಟ್ಟುಬಿಟ್ಟಿಲ್ಲವೆಂದು ಭಾವಿಸಿದರೂ, 4 ( 2) ನೇ ನಿಯಮವು ಆರಕ್ಕಿಂತ ಕಡಿಮೆ ವಿಭಾಗಗಳನ್ನು ಒಳಗೊಂಡಿರುವ ಪದವಿಪೂರ್ವ ಕಾಲೇಜುಗಳಿಗೆ ಅನ್ವಯವಾಗುವುದಿಲ್ಲವೆಂಬ ಅರ್ಥದಷ್ಟರಮಟ್ಟಿಗೆ ಸದರಿ ನಿಯಮವನ್ನು ಅರ್ಥೈಸಬೇಕಾಗುತ್ತದೆ.

4 ( 3) ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂತೆ, ಅಪೀಲುದಾರರು ನಡೆಸುತ್ತಿರುವ 13 ಪದವಿ-ಪೂರ್ವ ಕಾಲೇಜುಗಳು ಚೇತನ ಎಜುಕೇಷನ್ ಟ್ರಸ್ಟ್ (ನೋಂ) -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ 719 ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ಪಿಯುಸಿ) ಮತ್ತು ಇತರರು

ಆರು ವಿಭಾಗಗಳನ್ನು ಹೊಂದಿಲ್ಲವೆಂಬ ಸಂಗತಿಯ ಹಿನ್ನೆಲೆಯಲ್ಲಿ, 4 ( 2) ( ಎ) ನಿಯಮದ ಕಡ್ಡಾಯ ಅಗತ್ಯತೆಗಳು ಅಪೀಲುದಾರರಿಗೆ ಅನ್ವಯವಾಗುವುದಿಲ್ಲ.ಈ ಕಾರಣದ ಮೇಲೆ ಸಹ, ಯಾವ ಪ್ರಶ್ನಿತ ಆದೇಶದ ಮೇರೆಗೆ 4 ( 2) ( ಎ) ನಿಯಮವನ್ನು ಪಾಲಿಸಲು ವಿಫಲಗೊಂಡಿರುವ ಕಾರಣದ ಮೇಲೆ ಸದರಿ 13 ಕಾಲೇಜುಗಳ ಹೆಸರಿನಲ್ಲಿರುವ ಮಾನ್ಯತೆಯನ್ನು ಹಿಂಪಡೆಯಬೇಕೆಂದು ಕೋರಲಾಗಿದೆಯೋ, ಆ ಪ್ರಶ್ನಿತ ಆದೇಶವು ಸ ಂ ಪೂರ್ಣವಾಗಿ ಕಾನೂನುಬಾಹಿರವಾದುದಾಗಿದ್ದು, ರದ್ದುಗೊಳಿಸಲು ಯೋಗ್ಯವಾಗಿದೆ.

10. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ತಮ್ಮ ವಾದಗಳಿಗೆ ಸಮರ್ಥನೆಯಾಗಿ, ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ಚ ತೀರ್ಪುಗಳನ್ನು ಅವಲಂಬಿಸಿದ್ದಾರೆ:

(i) ಎ. ಸತ್ಯನಾರಾಯಣ ಮತ್ತು ಇತರರು -ವಿರುದ್ಧ-ಎಸ್.ಪುರುಷೋತ್ತಮ್ ಮತ್ತು ಇತರರು

(ii) ವಿಪ್ರೊ ಅಮಿಟೆಡ್ -ವಿರುದ್ಧ-ಅಸಿಸ್ಟಂಟ್ ಕಲೆಕ್ಟರ್ ಆಫ್ ಕಸ್ಟಮ್ಸ್ ಮತ್ತು ಇತರರು

11. ಎದುರುದಾರರ ಪರವಾಗಿ, ಇತರ ವಿಷಯಗಳ ಜೊತೆಗೆ ಅನುಬಂಧ-ಹೆಚ್ನಲ್ಲಿರುವ ಪ್ರಶ್ನಿತ ಆದೇಶ ಹಾಗೂ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ಸಮರ್ಥಿಸಿ ರಿಟ್ ಅರ್ಜಿಯಲ್ಲಿ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಲಾಗಿದೆ.ಅಪೀಲುದಾರರ ಪರವಾಗಿ ವಾದಿಸಿದ ಎಲ್ಲಾ ವಾದಗಳನ್ನು ಮತ್ತು ಕಾರಣಗಳನ್ನು ವಿರೋಧಿಸಿದ್ದಷ್ಟೇ ಅಲ್ಲದೆ, ಪ್ರಶ್ನಿಸಬೇಕೆಂದು ಕೋರಿರುವ 4 ( 2) ( ಎ) ನಿಯಮವು ಅಸಂವಿಧಾನಿಕ ಅಥವಾ ಅವೈಜ್ಞಾನಿಕವೂ ಅಲ್ಲ ಅಥವಾ ಅದು ನಿರಂಕುಶ ಅಥವಾ ಅತಾರ್ಕಿಕ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾದದೂ ಅಲ್ಲವಾದ್ದರಿಂದ, ಅದನ್ನು ಅಸಂವಿಧಾನಿಕವೆಂದು ಘೋಷಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ವಾದಿಸಲಾಗಿತ್ತು.

12. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಸಹ, ಅಧಿನಿಯಮದ ಮತ್ತು ನಿಯಮಗಳ ಸೂಚನೆಯನ್ನು ಗಮನದಲ್ಲಿಸಿರಿಕೊಂಡು, 4 ( 2) ನೇ ಮತ್ತು 4 ( 3) ನೇ ನಿಯಮಗಳ ಸಾಮರಸ್ಯಕರವಾದ ಮತ್ತು ಉದ್ದೇಶಿತ ಅರ್ಥವಿವರಣೆ ಹಾಗೂ ಶಾಸಕಾಂಗದ ಉದ್ದೇಶವು, 42) ನೇ ನಿಯಮದಲ್ಲಿ ಕಂಡುಬರುವ ಕನಿಷ್ಠ ಅಗತ್ಯತೆಗಳು, ವಿಭಾಗಗಳ ಸಂಖ್ಯೆ ಎಷ್ಟೇ ಇರಲಿ ಎಲ್ಲಾ ಪದವಿ-ಪೂರ್ವ ಕಾಲೇಜುಗಳಿಗೆ ಅನ್ವಯವಾಗುತ್ತವೆ ಎಂಬುದನ್ನು ಸೂಚಿಸುತ್ತವೆ ಎಂದು ವಾದಿಸಿದ್ದಾರೆ.

13. ಆಕ್ಷೇಪಣೆಗಳ ಹೇಳಿಕೆಯ 11 (ಬಿ) (ಬಿ) ಮತ್ತು (ಸಿ) ಕಂಡಿಕೆಗಳಲ್ಲಿ, 4 ( 3) ನೇ ನಿಯಮದ ಮೊದಲ ಸಾಲಿನಲ್ಲಿ ಕಂಡುಬರುವ ( 2) ನೇ ಉಪ-ನಿಯಮದ ಉಲ್ಲೇಖದೊಂದಿಗೆ 4 ( 3) ನೇ ನಿಯಮದ ಕರಡನ್ನು ರಚಿಸುವಾಗ, ' (ಬಿ) ' ಅಕ್ಷರವನ್ನು ತಪ್ಪಾಗಿ, ಕಣ್ತಪ್ಪಿನಿಂದ ಮತ್ತು ನಿರ್ಲಕ್ಷ್ಯದಿಂದ ಬಿಟ್ಟುಬಿಡಲಾಗಿದೆ ಎಂದು ವಾದಿಸಲಾಗಿತ್ತು.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ತೀರ್ಪಿನ ಕಣ್ತಪ್ಪು, ತಪ್ಪು, ನಿರ್ಲಕ್ಷ್ಯ, ದೋಷದಿಂದ ಮತ್ತು ನಿಯಮಗಳ ಕರಡನ್ನು ರಚಿಸುವಾಗ ಆದ ವ್ಯತ್ಯಾಸದಿಂದ, 4 ( 3) ನೇ ನಿಯಮವನ್ನು ವಾಸ್ತವವಾಗಿ,

ಕರಡು ರಚನೆಯ ನೈಜ ತಪ್ಪಾಗಿರುವ " ( 2) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳನ್ನು " ಎಂಬುದಕ್ಕೆ ಬದಲಾಗಿ, " ( 2) (ಬಿ) ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳನ್ನು " ಎಂಬುದಾಗಿ ಓದಿಕೊಳ್ಳಬೇಕು.ಆದುದರಿಂದ, ' (ಬಿ) ' ಅಕ್ಷರವನ್ನು ಒಳಗೊಂಡ ಸದರಿ ಲೋಪವು, ಶಾಸಕಾಂಗದ ಕಡೆಯಿಂದ ಆದ ಅಂತರ್ಗತ ವಿಷಯದ ಸಂದರ್ಭವಾಗಿದೆ ಎಂದು ವಾದಿಸಲಾಗಿದೆ.ಈ ಸಂದರ್ಭಗಳ ಮೇರೆಗೆ, ಅಧಿನಿಯಮದ ಮತ್ತು ನಿಯಮಗಳ ಹಾಗೂ ನಿಯಮಗಳಲ್ಲಿರುವ ಇತರ ಉಪಬಂಧಗಳ ಸೂಚನೆಯನ್ನು ಗಮನದಲ್ಲಿರಿಸಿಕೊಂಡು, ಶಾಸಕಾಂಗದ ಉದ್ದೇಶಕ್ಕೆ ಪರಿಣಾಮ ನೀಡುವ ಸಲುವಾಗಿ ಹಾಗೂ ಅಸಂಬದ್ಧ ಮತ್ತು ಅಸಂಗತ ಫಲಿತಾಂಶಗಳನ್ನು ತಪ್ಪಿಸಲು, ( 3) ನೇ ನಿಯಮದಲ್ಲಿನ (ಬಿ) 'ಅಕ್ಷರವನ್ನು ಓದುವುದು ಅಗತ್ಯವಾಗಿದೆ.ನಿರ್ದಿಷ್ಟವಾಗಿ ಅಂತರಗಳನ್ನು ತುಂಬುವಾಗ ಮತ್ತು ಸದರಿ ಲೋಪವನ್ನು ಸರಿಪಡಿಸುವುದಷ್ಟೇ ಅಲ್ಲದೆ, ನಿಯಮಗಳು ಸಾಧಿಸಬೇಕೆಂದು ಸೂಚಿಸಿರುವ ಉದ್ದೇಶವನ್ನು ಸಾಧಿಸಲು ಅದು ಅತ್ಯಗತ್ಯ ಅವಶ್ಯಕತೆಯಾಗಿತ್ತು.

14. ಮಾನ್ಯ ಸಹಾಯಕ ಸರ್ಕಾರಿ ವಕೀಲರು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

(i) ತಹಶೀಲ್ದಾರ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ ಉತ್ತರ ಪ್ರದೇಶ ರಾಜ್ಯ ಎಐಆರ್ 1959 ಎಸ್ಸಿ 1012

(ii) ಜೆ.ಕೆ. ಕಾಟನ್ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಉತ್ತರ ಪ್ರದೇಶ ರಾಜ್ಯ ಮತ್ತು ಇತರರು ಎಐಆರ್ 1961 ಎಸ್ಸಿ 1170

(iii) ಅಹಮದಾಬಾದ್ ನಗರದ ಪೌರಸಭಾ ನಿಗಮ ವಿರುದ್ಧ ಬೆನ್ ಹೀರಾಬೆನ್ ಮಣಿಲಾಲ್ (1983) 2 ಎಸ್ಸಿ 422

(iv) ಬಾಂಬೆ ಆನಂದ್ ಭವನ್ ರೆಸ್ಟೋರೆಂಟ್ –ವಿರುದ್ಧ ಪ್ರಾದೇಶಿಕ ನಿರ್ದೇಶಕರು, ನೌಕರರ ರಾಜ್ಯ ವಿಮಾ ನಿಗಮ (2009) 9 ಎಸ್ಸಿಸಿ 61

( v) ಮೆ:ಗಾಮನ್ ಇಂಡಿಯಾ ಅಮಿಟೆಡ್ ಮತ್ತು ಇತರರು-ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು (1974) 1 ಎಸ್ಸಿಸಿ 596

(vi) ಪಾರ್ಶ್ವನಾಥ ಚಾರಿಟಬಲ್ ಟ್ರಸ್ಟ್ ಮತ್ತು ಇತರರು ವಿರುದ್ಧ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಮತ್ತು ಇತರರು (2013) 3 ಎಸ್ಸಿಸಿ 385

(vii) ಚೇತನ್ ಪಠಾರೆ ಮತ್ತು ಇನ್ನೊಬ್ಬರು -ವಿರುದ್ಧ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಮತ್ತು ಇತರರು (2014) 14 ಎಸ್ಸಿಸಿ 328

15. ಅಪೀಲುದಾರರು ಹಾಗೂ ಎದುರುದಾರರ ಪರವಾಗಿ ಮಂಡಿಸಿದ ವಾದಗಳನ್ನು ನಾವು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ ಮತ್ತು ದಾಖಲೆಗಳಲ್ಲಿನ ಸಾಕ್ಷ್ಯಗಳನ್ನು ಅವಲೋಕಿಸಿದ್ದೇವೆ.ಮೇಲಿನ ಅಪೀಲಿನಲ್ಲಿ ನಮ್ಮ ಪರಿಗಣನೆಗೆ ಈ ಮುಂದಿನ ಅಂಶಗಳು ಉದ್ಭವಿಸಿವೆ:

( 1) 2006 ರ ಸದರಿ ನಿಯಮಗಳ 4 ( 2) ( ಎ) ನಿಯಮವು ಭಾರತ ಸಂವಿಧಾನದ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಾಗಿದೆಯೇ?

(ii) 4 (2) (ಎ) ನಿಯಮದ ಅಡಿಯಲ್ಲಿ ಪದ್ಯಾಲೋಚಿಸಿದಂತೆ 25,000 ಚದರ ಅಡಿಗಳ ಭೂಮಿಯ ಕನಿಷ್ಠ ಅಗತ್ಯತೆಯು, 2006 ರ ಸದರಿ ನಿಯಮಗಳ 4 (3) ನೇ ನಿಯಮದ ನಿಬಂಧನೆಗಳಲ್ಲಿನ ಆರಕ್ಕಿಂತ ಕಡಿಮೆ ವಿಭಾಗಗಳನ್ನು ಒಳಗೊಂಡಿರುವ ಪದವಿ-ಪೂರ್ವ ಕಾಲೇಜಿಗೆ ಅನ್ವಯವಾಗುತ್ತದೆಯೇ?

(iii) ' (ಬಿ) ' ಅಕ್ಷರವನ್ನು ( 2) ನೇ ಉಪ-ನಿಯಮದ ಪದಗಳ ನಂತರ ಮೊದಲ ಸಾಲಿನಲ್ಲಿ ಓದಬೇಕಾಗಿರುವಲ್ಲಿ, 4 ( 3) ನೇ ನಿಯಮಕ್ಕೆ ಅಂತರ್ಗತ ವಿಷಯ ತತ್ವಗಳು ಅನ್ವಯವಾಗುತ್ತವೆಯೇ?

(iv) 3 ನೇ ಎದುರುದಾರರು ಹೊರಡಿಸಿದದಿನಾಂಕ: 03.07.2015 ರ ಅನುಬಂಧ-ಹೆಚ್ ನಲ್ಲಿರುವ ಆದೇಶವನ್ನು ಪ್ರಶ್ನಿಸಿರುವುದನ್ನು ತಿರಸ್ಕರಿಸಿ, ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು ಹೊರಡಿಸಿರುವ ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪದ ಅಗತ್ಯತೆ ಇದೆಯೇ?

16. ವಾದಾಂಶಸಂಖ್ಯೆ: (i)

ಅನುಕೂಲದ ಸಲುವಾಗಿ, ಸದರಿ ನಿಯಮಗಳ 4 ( 1) ನೇ ಮತ್ತು 4 ( 2) ನೇ ನಿಯಮಗಳನ್ನು ಈ ಕೆಳಗಿನಂತೆ ಉದ್ಧರಿಸಲಾಗಿದೆ:

4. ಹೊಸ ಖಾಸಗಿ ಪದವಿ ಪೂರ್ವ ಕಾಲೇಜನ್ನು ಸ್ಥಾಪಿಸುವ ಕಾರವಿಧಾನ.

(1) ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸುವ ನೋ ೦ ದಾಯಿತ ವ್ಯವಸ್ಥಾಪನಾ ಸಮಿತಿಯು, 500.00 ರೂ.ಗಳ ಶುಲ್ಕದೊಂದಿಗೆ ನಮೂನೆ -1 ರಲ್ಲಿ, ನಿರ್ದೇಶಕರಿಗೆ ಹಾಗೆ ಸ್ಥಾಪಿಸುವ ಉದ್ದೇಶವನ್ನು ತಿಳಿಸತಕ್ಕದ್ದು.ನಿರ್ದೇಶಕರು, ನಮೂನೆ -11 ರಲ್ಲಿ ಇರಿಸಿದ ರಿಜಿಸ್ಟರ್ನಲ್ಲಿ ಅಂಥ ಸೂಚನೆಯನ್ನು ದಾಖಲಿಸತಕ್ಕದ್ದು ಮತ್ತು ತರುವಾಯ, ವ್ಯವಸ್ಥಾಪನಾ ಸಮಿತಿಯಿಂದ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ವ್ಯವಸ್ಥಾಪನಾ ಸಮಿತಿಗೆ ಉದ್ದೇಶ ಪತ್ರವನ್ನು ನೀಡತಕ್ಕದ್ದು.

(2) ಉದ್ದೇಶ ಪತ್ರವನ್ನು ಸ್ವೀಕರಿಸಿದ ನಂತರ, ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದ ವ್ಯವಸ್ಥಾಪನಾ ಸಮಿತಿಯು,

(ಎ) ಉದ್ದೇಶ ಪತ್ರದ ದಿನಾಂಕದಿಂದ ಒಂದು ವರ್ಷದ ಒಳಗೆ, ಪ್ರಾಂಶುಪಾಲರ ಕಚೇರಿ, ತರಗತಿ ಕೊಠಡಿಗಳು, ಗ್ರಂಥಾಲಯ, ಮುಂತಾದವುಗಳನ್ನು ಒಳಗೊಂಡು ಕಾಲೇಜು ಕಟ್ಟಡವನ್ನು ನಿರ್ಮಿಸಲು ಅದು ಉದ್ದೇಶಿಸುವ ಕನಿಷ್ಠ 25,000 ಚದರ ಅಡಿ ಭೂಮಿಯನ್ನು ಆರ್ಜಿಸತಕ್ಕದ್ದು;

(ಬಿ) ಉದ್ದೇಶ ಪತ್ರದ ದಿನಾಂಕದಿಂದ ಮೂರು ವರ್ಷಗಳ ಳಗಾಗಿ, ಈ ಮುಂದಿನ ಸೌಲಭ್ಯಗಳೊಂದಿಗೆ ಮತ್ತು ಕೊಠಡಿಗೆ ಪ್ರವೇಶವನ್ನು ಹೊಂದಿಕೊಂಡಿರುವ ಕನಿಷ್ಠ 8 ಅಡಿ ಅಗಲದ ಕಾರಿಡಾರ್ ಅಥವಾ ವರಾಂಡವನ್ನು ಹೊಂದಿರುವ ಕೊಠಡಿಗಳ ಸಹಿತ ಕಟ್ಟಡವನ್ನು ಸದರಿ ಭೂಮಿಯ ಮೇಲೆ ನಿರ್ಮಿಸತಕ್ಕದ್ದು, ಎಂದರೆ:

( i) ಕನಿಷ್ಠ 250 ಚದರ ಅಡಿ ಮೇಲು ಪಾಯ (ಪ್ಲಿಂತ್) ಪ್ರದೇಶದೊಂದಿಗೆ ಪ್ರಾಂಶುಪಾಲರ ಕಚೇರಿ;

(ii) ಕನಿಷ್ಠ 250 ಚದರ ಅಡಿ ಮೇಲು ಪಾಯ (ಪ್ಲಿಂತ್) ಪ್ರದೇಶದೊಂದಿಗೆ ಕಚೇರಿ ಕೊಠಡಿ;

(iii) ಕನಿಷ್ಠ 500 ಚದರ ಅಡಿ ಮೇಲು ಪಾಯ (ಪ್ಲಿಂಗ್) ಪ್ರದೇಶದೊಂದಿಗೆ ಸಿಬ್ಬಂದಿ ಕೊಠಡಿ;

(iv) ಸಾಕಷ್ಟು ನೀರು ಸಂಗ್ರಹ ಸೌಲಭ್ಯಗಳೊಂದಿಗೆ 10 ವ್ಯಕ್ತಿಗಳು ಏಕಕಾಲದಲ್ಲಿ ಬಳಸುವುದಕ್ಕಾಗಿ ಹೊಂದಿಕೊಂಡ ಶೌಚಾಲಯ ಗಳೊಂದಿಗೆ ಬಾಲಕಿಯರಿಗಾಗಿ ಕನಿಷ್ಠ 500 ಚದರ ಅಡಿ ಮೇಲು ಪಾಯ (ಪ್ಲಿಂತ್) ಪ್ರದೇಶದೊಂದಿಗೆ ನಿರೀಕ್ಷಣಾ ಕೊಠಡಿ;

( v) 10 ವ್ಯಕ್ತಿಗಳು ಏಕಕಾಲಿಕವಾಗಿ ಬಳಸುವ ಸೌಲಭ್ಯ ಸಹಿತ ಬಾಲಕರ ಶೌಚಾಲಯಗಳು;

(vi) ಕನಿಷ್ಠ 1,000 ಚದರ ಅಡಿ ಮೇಲು ಪಾಯ (ಪ್ಲಿಂತ್) ಪ್ರದೇಶದೊಂದಿಗೆ ಗ್ರಂಥಾಲಯ;

(vii) ಕನಿಷ್ಠ 1,000 ಚದರ ಅಡಿ ಮೇಲು ಪಾಯ (ಪ್ಲಿಂತ್) ಪ್ರದೇಶದೊಂದಿಗೆ ವಾಚನಾಲಯ;

(viii) ಕನಿಷ್ಠ 22 ಅಡಿ X 30 ಅಡಿ ಅಳತೆಯ ಕನಿಷ್ಠ 6 ಉಪನ್ಯಾಸ ಕೊಠಡಿಗಳು;

(ix) ಒಂದೇ ಸಮಯದಲ್ಲಿ ಕನಿಷ್ಠ 100 ಬೈಸಿಕಲ್ಗಳನ್ನು ನಿಲ್ಲಿಸಲು ಅವಕಾಶವಿರುವ ಬೈಸಿಕಲ್ ನಿಲುಗಡೆ;

(  X) ವಿಜ್ಞಾನ ವಿಷಯಗಳನ್ನು ಕಲಿಸುವುದಿದ್ದರೆ, ಆಗ ಮೂರು ಪ್ರಯೋಗಾಲಯಗಳು ಒಂದು ಭೌತಶಾಸ್ತ್ರ, ಒಂದು ರಸಾಯನಶಾಸ್ತ್ರ ಮತ್ತು ಒಂದು ಜೀವಶಾಸ್ತ್ರ ಪ್ರಯೋಗಾಲಯಗಳು ಹಾಗೂ ಎಲೆಕ್ಟ್ರಾನಿಕ್ಸ್ ಅಥವಾ ಕಂಪ್ಯೂಟರ್ ವಿಜ್ಞಾನ ವಿಷಯಗಳನ್ನು ಕಲಿಸುವುದಿದ್ದರೆ, ಪ್ರತಿಯೊಂದು 24 ಅಡಿ X 60 ಅಡಿಯ ಕನಿಷ್ಠ ಮೇಲು ಪಾಯ (ಪಿಂತ್) ಪ್ರದೇಶದೊಂದಿಗೆ ಈ ವಿಷಯಗಳಿಗೆ ಪ್ರತ್ಯೇಕ ಪ್ರಯೋಗಾಲಯಗಳು;

(ಸಿ) ಪದವಿ-ಪೂರ್ವ ಕಾಲೇಜನ್ನು ನಡೆಸುವುದಕ್ಕೆ ಕಟ್ಟಡವನ್ನು ಸೂಕ್ತವನ್ನಾಗಿಸಲು ಪ್ರಯೋಗಾಲಯಗಳು, ತರಗತಿ ಕೊಠಡಿಗಳು, ಕಚೇರಿ ಕೊಠಡಿಗಳು ಮತ್ತು ಶೌಚಾಲಯಗಳಲ್ಲಿ ನೀರು, ವಿದ್ಯುಚ್ಛಕ್ತಿ 0 ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(ಡಿ) ಡೆಸ್ಕ್ಗಳು, ಬೆಂಚುಗಳು, ಮೇಜುಗಳು, ಕಚೇರಿ ಪೀಠೋಪಕರಣ, ಕಪಾಟುಗಳು, ಕಚೇರಿ ಸಾಧನ-ಸಾಮಗ್ರಿಗಳು, ಪ್ರಯೋಗಾಲಯಗಳಲ್ಲಿ ಉಪಕರಣಗಳು ಮತ್ತು ಸಾಧನ ಸಾಮಗ್ರಿಗಳು;

17. ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ (ಸಂಕ್ಷಿಪ್ತವಾಗಿ ' ಅಧಿನಿಯಮ) 145 ನೇ ಪ್ರಕರಣದ ಅಡಿಯಲ್ಲಿ ನೀಡಿದ ಅಧಿಕಾರದ ಮೇರೆಗೆ ಸದರಿ ನಿಯಮಗಳನ್ನು ರೂಪಿಸಲಾಗಿದೆ.ದಿನಾಂಕ: 01.06.1995 ರಿ ಂ ದ ಜಾರಿಗೆ ಬಂದಿರುವ ಈ ಅಧಿನಿಯಮವನ್ನು, ಇತರ ವಿಷಯಗಳ ಜೊತೆಗೆ, ಶೈಕ್ಷಣಿಕ ಸಂಸ್ಥೆಗಳ ಅಭಿವೃದ್ಧಿಯನ್ನು ಯೋಜಿಸಲು, ಆರೋಗ್ಯಕರ ಶಿಕ್ಷಣ ವೃತ್ತಿ ಬೋಧಿಸಲು, ಶಿಕ್ಷಣದ ಗುಣಮಟ್ಟ, ಇತ್ಯಾದಿ ನಿರ್ವಹಣೆ ಮತ್ತು ಸುಧಾರಣೆಗಾಗಿ ಉಪಬಂಧ ಕಲ್ಪಿಸುವ ಉದ್ದೇಶದೊಂದಿಗೆ ಅಧಿನಿಯಮಿತಗೊಳಿಸಲಾಗಿದೆ.36 ರಿಂದ 39 ನೇ ಪ್ರಕರಣಗಳನ್ನು ಒಳಗೊಂಡಿರುವ ಸದರಿ ಅಧಿನಿಯಮದ 6 ನೇ ಅಧ್ಯಾಯವು, ಇತರ ವಿಷಯಗಳ ಜೊತೆಗೆ, ಶೈಕ್ಷಣಿಕ ಸಂಸ್ಥೆಗಳ ಮಾನ್ಯತೆ, ಇತ್ಯಾದಿ ಕುರಿತು ವ್ಯವಹರಿಸುತ್ತದೆ.

18. ಅಧಿನಿಯಮದ 145 ನೇ ಪ್ರಕರಣದ ಅಡಿಯಲ್ಲಿ ಅಂತರ್ಗತಗೊಳಿಸಿರುವ ನಿಯಮ ರಚನಾಧಿಕಾರವು, ಅಧಿನಿಯಮದ ಉದ್ದೇಶಗಳನ್ನು ನಡೆಸಲು ನಿಯಮಗಳನ್ನು ರಚಿಸಲು ಮತ್ತು ವಿವಿಧ ಶಾಸನಾತ್ಮಕ ಉಪಬಂಧಗಳಿಗೆ ಪರಿಣಾಮ ನೀಡಲು, ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ ಎಂಬುದನ್ನು ಸೂಚಿಸುತ್ತದೆ.ನಿರ್ದಿಷ್ಟವಾಗಿ, 145 ( 2) (xiii) ಮತ್ತು(xiv) ನೇ ಪ್ರಕರಣವು, ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಆಡಳಿತಕ್ಕೆ ಹಾಗೂ ಮಾನ್ಯತೆ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಮತ್ತು

ಅದಕ್ಕಾಗಿ ಷರತ್ತುಗಳನ್ನು ವಿಧಿಸಲು ಉಪಬಂಧ ಕಲ್ಪಿಸುವ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.ಸದರಿ ಅಧಿನಿಯಮದ 145 ನೇ ಪ್ರಕರಣದ ಅಡಿಯಲ್ಲಿನ ಈ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರವು 2006 ರ ಸದರಿ ನಿಯಮಗಳನ್ನು ರೂಪಿಸಿದೆ.

19. ನಿಯಮಗಳಲ್ಲಿರುವ ಹಲವಾರು ಉಪಬಂಧಗಳನ್ನು ಅವಲೋಕಿಸಲಾಗಿ, ನಿಯಮಗಳಲ್ಲಿರುವ ಇತರ ಅಂಶಗಳ ಜೊತೆಗೆ ಕರ್ನಾಟಕದಲ್ಲಿ ಪದವಿ-ಪೂರ್ವ ಕಾಲೇಜುಗಳನ್ನು ಸ್ಥಾಪಿಸುವುದಕ್ಕೆ, ಮಾನ್ಯತೆ ನೀಡುವುದಕ್ಕೆ ಮತ್ತು ಪ್ರವೇಶ D ನೀಡುವುದಕ್ಕೆ ಸಂಬಂಧಿಸಿದ ಸ್ವಯಂ-ಅಂತರ್ಗತ ಸಂಹಿತೆಯನ್ನು ನಿಯಮಗಳು ಒಳಗೊಂಡಿವೆ ಎಂಬುದನ್ನು ಅವು ಸೂಚಿಸುತ್ತವೆ.2 ನೇ ಮತ್ತು 3 ನೇ ನಿಯಮಗಳು, ವಿವಿಧ ಪ್ರವರ್ಗಗಳನ್ನಾಗಿ ವರ್ಗೀಕರಿಸುವುದರೊಂದಿಗೆ ಪದವಿ-ಪೂರ್ವ ಕಾಲೇಜುಗಳ ವಿವಿಧ ವಿಧಗಳನ್ನು ಕುರಿತು ವ್ಯವಹರಿಸುತ್ತವೆ.4 ನೇ ನಿಯಮವು, ಹೊಸ ಪದವಿ-ಪೂರ್ವ ಕಾಲೇಜಿನ ಸ್ಥಾಪನೆಗಾಗಿ ಸವಿವರವಾದ ಪ್ರಕ್ರಿಯೆ ಕುರಿತು ವ್ಯವಹರಿಸುತ್ತದೆ.5 ನೇ ನಿಯಮವು, ಈಗಾಗಲೇ ಸರ್ಕಾರಿ ಅನುಮತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಅಸ್ತಿತ್ವದಲ್ಲಿರುವ ಪದವಿಪೂರ್ವ ಕಾಲೇಜುಗಳಿಗೆ ನಿಯಮಗಳ ಅನ್ವಯತೆಯನ್ನು ಕುರಿತು ಪರ್ಯಾಲೋಚಿಸುತ್ತದೆ.6 ನೇ ನಿಯಮದಲ್ಲಿ ಪದವಿ-ಪೂರ್ವ ಕಾಲೇಜುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಉಪಬಂಧ ಕಲ್ಪಿಸಲಾಗಿದೆ.7 ರಿಂದ 9 ನೇ ನಿಯಮಗಳು, ಪದವಿ-ಪೂರ್ವ ಕಾಲೇಜುಗಳಿಗೆ ಮಾನ್ಯತೆ ಮತ್ತು ಪ್ರವೇಶ ನೀಡುವ ಪ್ರಕ್ರಿಯೆಗಳನ್ನು ಒಳಗೊಂಡರೆ, 10 ರಿಂದ 14 ನೇ ನಿಯಮಗಳು ಅಧ್ಯಯನ, ಹಾಜರಾತಿ, ಬೋಧನಾ ಸಮಯ ಇತ್ಯಾದಿ ವಿಷಯಗಳ ಸಂಬಂಧದಲ್ಲಿನ ಅಗತ್ಯತೆಗಳನ್ನು ಒಳಗೊಂಡಿದ್ದು, ಅವು 4 ನೇ ಅಧ್ಯಾಯದ ಭಾಗವಾಗಿವೆ.5 ನೇ ಅಧ್ಯಾಯವು, 15 ರಿಂದ 24 ರವರೆಗಿನ ನಿಯಮಗಳಲ್ಲಿ ಉಪಬಂಧಿಸಿರುವಂತೆ, ನೇಮಕಾತಿ ಮತ್ತು ಸಹಾಯಾನುದಾನಕ್ಕೆ ಸಂಬಂಧಿಸಿದ ಅನುದಾನಿತ ಪದವಿ-ಪೂರ್ವ ಕಾಲೇಜುಗಳನ್ನು ಕುರಿತು ವ್ಯವಹರಿಸಿದರೆ, 25 ರಿಂದ 30 ರವರೆಗಿನ ನಿಯಮಗಳು ಎಲ್ಲಾ ಪದವಿ-ಪೂರ್ವ ಕಾಲೇಜುಗಳ ನೌಕರರ ನಡತೆ ಸಂಹಿತೆ, ಶಿಸ್ತು ಮತ್ತು ನಿಯಂತ್ರಣವನ್ನು ಕುರಿತು ವ್ಯವಹರಿಸುತ್ತವೆ.

20. 4 ( 2) (  ಎ) ನಿಯಮವು, ಅವೈಜ್ಞಾನಿಕ, ಅತಾರ್ಕಿಕ, ನಿರಂಕುಶ, ಅಕಾರಣಯುಕ್ತವಾಗಿದೆ ಮತ್ತು ಭಾರತ ಸಂವಿಧಾನದ 14 ನೇ, 19 ನೇ ಮತ್ತು 21 ನೇ ಅನುಚ್ಛೇದಗಳಿಗೆ ವಿರುದ್ಧವಾಗಿದೆ ಹಾಗೂ ಈ ನಿಯಮವು ಅಧಿನಿಯಮವು ಸಾಧಿಸಬೇಕೆಂದಿರುವ ಉದ್ದೇಶದೊಂದಿಗೆ ಯಾವುದೇ ಸಕಾರಣಯುಕ್ತ ಸುಸಂಗತತೆ ಅಥವಾ ಸಂಬಂಧವನ್ನು ಹೊಂದಿಲ್ಲ ಮತ್ತು ಹಾಗಾಗಿ ಅದು ಬಿಟ್ಟುಬಿಡುವುದಕ್ಕೆ ಅರ್ಹವಾಗಿದೆ ಎಂಬುದು ಅಪೀಲುದಾರರ ವಾದವಾಗಿದೆ.

21. ಶಾಸನಾತ್ಮಕ ಉಪಬಂಧದ ಸಂವಿಧಾನಾತ್ಮಕತೆಗೆ ಸಂಬಂಧಪಟ್ಟಂತೆ ಪೂರ್ವಭಾವನೆ ಇರುತ್ತದೆ ಎಂಬುದು ಕಾನೂನಿನ ಇತ್ಯರ್ಥಗೊಂಡ ನಿಲುವಾಗಿದ್ದು, ಕಾನೂನಿನ ಉಪಬಂಧ ಕಲ್ಪಿಸುವುದು ಹೇಗೆ ಅಸಂವಿಧಾನಿಕವಾದುದು ಎಂಬುದನ್ನು ಸಾಬೀತುಪಡಿಸಲು ಶಾಸನಾತ್ಮಕ ಉಪಬಂಧವನ್ನು ಪ್ರಶ್ನಿಸುವುದು ವ್ಯಕ್ತಿಗೆ ಸಂಬಂಧಿಸಿದ ವಿಷಯವಾಗಿದೆ.ಆದಾಗ್ಯೂ, 4 ( 2) (  ಎ) ನಿಯಮದಲ್ಲಿ ಗೊತ್ತುಪಡಿಸಲಾದ ಅಂಥ ಅಗತ್ಯತೆಯು ಏಕೆ ಅವೈಜ್ಞಾನಿಕವಾಗಿದೆ ಅಥವಾ ನಿರಂಕುಶವಾಗಿದೆ ಅಥವಾ ಅಕಾರಣಯುಕ್ತವಾಗಿದೆ ಎಂಬುದನ್ನು ಮನವರಿಕೆಯಾಗುವಂತೆ ವಿವರಿಸಲು ಅಪೀಲುದಾರರಿಗೆ ಸಾಧ್ಯವಾಗಿಲ್ಲ.

22. ಇದಲ್ಲದೆ, 4 ( 2) (  ಎ) ನಿಯಮವು, ಉದ್ದೇಶ ಪತ್ರದ ದಿನಾಂಕದಿಂದ ಒಂದು ವರ್ಷದ ಒಳಗಾಗಿ, ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದ ವ್ಯವಸ್ಥಾಪನಾ ಸಮಿತಿಯು, ಕಾಲೇಜು ಕಟ್ಟಡವನ್ನು

ನಿರ್ಮಿಸಲು ಅದು ಉದ್ದೇಶಿಸಿದ ಕನಿಷ್ಠ 25,000 ಚದರ ಅಡಿ ಭೂಮಿಯನ್ನು ಆರ್ಜಿಸತಕ್ಕದ್ದು ಎಂದು ಗೊತ್ತುಪಡಿಸಿದರೆ, 4 ( 2) (ಬಿ) ನಿಯಮವು ಸ್ಪಷ್ಟವಾಗಿ, ಉದ್ದೇಶ ಪತ್ರದ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಒಳಗಾಗಿ ಅಂಥ ಆರ್ಜಿಸಿದ ಭೂಮಿಯ ಮೇಲೆ ನಿರ್ಮಿಸಬೇಕಾದಂಥ ಕನಿಷ್ಠ ನಿರ್ಮಾಣ ಏನಾಗಿರಬೇಕು ಎಂಬುದನ್ನು ಕುರಿತು ಪದ್ಯಾಲೋಚಿಸುತ್ತದೆ.ಸದರಿ ಅಗತ್ಯತೆಗಳೆಂದರೆ, ಸ್ಪಷ್ಟವಾಗಿ ಯಾವುದೇ ಕಾಲೇಜಿಗೆ ಅತ್ಯಗತ್ಯವಾಗಿರುವ ಪ್ರಾಂಶುಪಾಲರ ಕಚೇರಿ, ಕಚೇರಿ ಕೊಠಡಿ, ಸಿಬ್ಬಂದಿ ಕೊಠಡಿ, ನಿರೀಕ್ಷಣಾ ಕೊಠಡಿ, ಶೌಚಾಲಯ, ಗ್ರಂಥಾಲಯ, ಇತ್ಯಾದಿಗಳಾಗಿದ್ದು, ಇದಕ್ಕಾಗಿ ಆರ್ಜಿಸಬೇಕಾಗಿರುವ 25,000 ಚದರ ಅಡಿಗಳ ಭೂಮಿಯನ್ನು, ಕಲ್ಪನೆಯ ಯಾವುದೇ ವ್ಯಾಪ್ತಿಯ ಮೂಲಕ ಅವೈಜ್ಞಾನಿಕವೆಂದಾಗಲಿ ಅಥವಾ ಅಕಾರಣಯುಕ್ತವೆಂದಾಗಲಿ ಅರ್ಥೈಸಲಾಗುವುದಿಲ್ಲ.ಅಲ್ಲದೆ, ಸದರಿ ಅಗತ್ಯತೆಯನ್ನು ವಿಧಿಸಿರುವುದು, ಶೈಕ್ಷಣಿಕ ಸಂಸ್ಥೆಗಳ ಯೋಜಿತ ಅಭಿವೃದ್ಧಿಗೆ, ಆರೋಗ್ಯಕರ ಶೈಕ್ಷಣಿಕ ವೃತ್ತಿ ಬೋಧನೆಗೆ, ಶಿಕ್ಷಣದ ಗುಣಮಟ್ಟದಲ್ಲಿ ನಿರ್ವಹಣೆ ಮತ್ತು ಸುಧಾರಣೆ, ಇತ್ಯಾದಿಗೆ ಉಪಬಂಧ ಕಲ್ಪಿಸಿರುವ ಅಧಿನಿಯಮದ ಉದ್ದೇಶಕ್ಕೆ ಅನುಗುಣವಾಗಿಯೇ ಇದೆ. ಆದುದರಿಂದ, ಅಪೀಲುದಾರರ ಈ ವಾದವು ತಳ್ಳಿಹಾಕಲು ಯೋಗ್ಯವಾಗಿದೆ.

23. 4 ( 2) ( ಎ) ನಿಯಮವು, ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿದೆ ಎಂದು ಈ ಸಂಬಂಧದಲ್ಲಿ ಮಂಡಿಸಿದ ಇತರ ವಾದವು ಸಹ ಮನವರಿಕೆದಾಯಕವಾಗಿರುವುದಿಲ್ಲ.ಸಹಜವಾಗಿಯೇ, 4 ( 2) ( ಎ) ನಿಯಮಕ್ಕೆ ವಿರುದ್ಧವಾಗಿರುವಂಥದ್ದು ಯಾವುದೂ ಇಲ್ಲ. ಇದಕ್ಕೆ ಪ್ರತಿಯಾಗಿ, 145 ( 1) ನೇ ಪ್ರಕರಣವು, ಸದರಿ ಅಧಿನಿಯಮದ ಉದ್ದೇಶಗಳನ್ನು ಕಾರರೂಪಕ್ಕೆ ತರುವ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ ಮತ್ತು 145 ( 2) (xiii) ನೇ ಪ್ರಕರಣವು ವಿಶೇಷವಾಗಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಆಡಳಿತಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.ಶೈಕ್ಷಣಿಕ ಸಂಸ್ಥೆಗಳ ಯೋಜಿತ ಅಭಿವೃದ್ಧಿ; ಆರೋಗ್ಯಕರ ಶಿಕ್ಷಣ ವೃತ್ತಿ ಬೋಧನೆ; ಶೈಕ್ಷಣಿಕ ಮತ್ತು ಉತ್ತಮ ಸಂಘಟನೆಯ ಗುಣಮಟ್ಟಗಳಲ್ಲಿ ನಿರ್ವಹಣೆ ಮತ್ತು ಸುಧಾರಣೆ-ಇವು ಸದರಿ ಅಧಿನಿಯಮದ ಮುಖ್ಯ ಉದ್ದೇಶವಾಗಿರುವುದರಿಂದ, ಅಧಿನಿಯಮದ ಉದ್ದೇಶವನ್ನು ಸಾಧಿಸಲು ಅವಶ್ಯಕ ಅಂಶವಾಗಿರುವ ಶೈಕ್ಷಣಿಕ ಸಂಸ್ಥೆಗೆ ಸೂಕ್ತ ಮೂಲಸೌಕಯ್ಯದ ಅಗತ್ಯತೆಯು ಸದರಿ ಅಧಿನಿಯಮದ ಉದ್ದೇಶದಲ್ಲಿ ಅಂತರ್ನಿಹಿತವಾಗಿದೆ.ತತ್ಪರಿಣಾಮವಾಗಿ, ಕನಿಷ್ಠ ಅಗತ್ಯತೆಗಳಿಗೆ ಉಪಬಂಧ ಕಲ್ಪಿಸುವ ನಿಯಮಗಳನ್ನು ಕುರಿತು ಅಧಿನಿಯಮ ಅಧಿಕಾರವನ್ನು ಮೀರಿದ್ದೆಂದು ಅಭಿಪ್ರಾಯಪಡಲಾಗುವುದಿಲ್ಲ.

24. ಇದಲ್ಲದೆ ನಿಯಮಗಳು, ಕಾಲೇಜಿನ ಸ್ಥಾಪನೆಗಾಗಿ ಪ್ರಕ್ರಿಯೆಗಳನ್ನು ರೂಪಿಸುವುದು ಮತ್ತು ಮಾನ್ಯತೆ ನೀಡುವುದು ಹಾಗೂ ಸದರಿ ಉದ್ದೇಶಗಳಿಗಾಗಿ ಕನಿಷ್ಠ ಅಗತ್ಯತೆಗಳನ್ನು ಗೊತ್ತುಪಡಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು ಒಳಗೊಂಡು ಎಲ್ಲ ಅನಿರೀಕ್ಷತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸ್ವಯಂ ಪರಿಪೂರ್ಣ ಸಂಹಿತೆಯನ್ನು ರಚಿಸುತ್ತವೆ.

25. ಆದುದರಿಂದ, 4 ( 2) (ಎ) ನಿಯಮದಲ್ಲಿ ಕನಿಷ್ಠ 25,000 ಚದರ ಅಡಿಗಳ ಭೂಮಿಯ ಅಗತ್ಯತೆಯು, ಅದನ್ನು ತಾರತಮ್ಯಕರವನ್ನಾಗಿಸುವುದಿಲ್ಲ ಅಥವಾ ನಿರಂಕುಶವನ್ನಾಗಿಸುವುದಿಲ್ಲ ಹಾಗೂ ಸದರಿ ಅಧಿನಿಯಮದ ಉದ್ದೇಶಗಳನ್ನು ಬೆಂಬಲಿಸುವ ಉದ್ದೇಶದೊಂದಿಗೆ ಗೊತ್ತುಪಡಿಸಲಾದ ಸೂಕ್ತ ಷರತ್ತಾಗಿದೆ ಎಂದು ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು ಸರಿಯಾಗಿಯೇ ಅಭಿಪ್ರಾಯಪಟ್ಟಿದ್ದಾರೆ.

26. ಮೇಲೆ ಹೇಳಿದಂತೆ, ಸದರಿ ನಿಯಮಗಳು, ಕಾಲೇಜಿನ ಸ್ಥಾಪನೆಗಾಗಿ ಪ್ರಕ್ರಿಯೆಗಳನ್ನು ರೂಪಿಸುವುದು ಮತ್ತು ಮಾನ್ಯತೆ ನೀಡುವುದು ಹಾಗೂ ಸದರಿ ಉದ್ದೇಶಗಳಿಗಾಗಿ ಕನಿಷ್ಠ ಅಗತ್ಯತೆಗಳನ್ನು ಗೊತ್ತುಪಡಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು ಒಳಗೊಂಡು ಎಲ್ಲ ಅನಿರೀಕ್ಷತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸ್ವಯಂ-ಪರಿಪೂರ್ಣ ಸಂಹಿತೆಯನ್ನು ರಚಿಸುತ್ತವೆ.ಮಾನ್ಯ ಏಕಪೀಠ ನ್ಯಾಯಾಧೀಶರು ಸರಿಯಾಗಿಯೇ ಅಭಿಪ್ರಾಯಪಟ್ಟಿರುವಂತೆ, ಅಧಿನಿಯಮದ ಮತ್ತು ನಿಯಮಗಳ ಅವಲೋಕನದಿಂದ, 4 ( 2) ( ಎ) ನಿಯಮದಲ್ಲಿರುವ ಕನಿಷ್ಠ 25,000 ಚದರ ಅಡಿಗಳ ಭೂಮಿಯ ಅಗತ್ಯತೆಯು, ಅದನ್ನು ತಾರತಮ್ಯಕರವನ್ನಾಗಿಸುವುದಿಲ್ಲ ಅಥವಾ ನಿರಂಕುಶವನ್ನಾಗಿಸುವುದಿಲ್ಲ.ಇದಲ್ಲದೆ, ಸದರಿ ಕನಿಷ್ಠ ಅಗತ್ಯತೆಯು, ಅನುಚಿತವಾದುದು, ಅತಾರ್ಕಿಕವಾದುದು, ಅವೈಜ್ಞಾನಿಕವಾದುದು ಅಲ್ಲ ಅಥವಾ ಯಾವುದೇ ಸಾಂವಿಧಾನಿಕ ಉಪಬಂಧಗಳನ್ನಾಗಲಿ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮದ ಯಾವುದೇ ಉಪಬಂಧವನ್ನಾಗಲಿ ಅದು ಉಲ್ಲಂಘಿಸುವುದಿಲ್ಲ.ಶಾಸನಾತ್ಮಕ ಉಪಬಂಧದ ಅಥವಾ ನಿಯಮದ ಸಂವಿಧಾನಿಕತೆಗೆ ಸಂಬಂಧಿಸಿದ ಪೂರ್ವಭಾವನೆಯಾಗಿದೆ ಎಂದು ಹೇಳುವುದರಲ್ಲಿ ಯಾವುದೇ ಪ್ರಯೋಜನವಿಲ್ಲ ಮತ್ತು ಅದು ಹೇಗೆ ಸಂವಿಧಾನಿಕವಾಗಿ ಅಸಿಂಧುವಾಗಿದೆ ಅಥವಾ ಅಧಿಕಾರಕ್ಕೆ ವಿರುದ್ಧವಾಗಿದೆ ಎಂದು ಸಾಬೀತುಪಡಿಸುವುದು ಅದನ್ನು ಪ್ರಶ್ನಿಸುವ ವ್ಯಕ್ತಿಗೆ ಬಿಟ್ಟ ವಿಚಾರವಾಗಿದೆ.ಶಾಸಕಾಂಗವು, ತನ್ನ ವಿವೇಚನಾನುಸಾರ, ಪದವಿ-ಪೂರ್ವ ಕಾಲೇಜಿನಲ್ಲಿ ಒದಗಿಸಬೇಕಾದ ಮೂಲ ಸೌಕಯ್ಯಗಳನ್ನು ಗಮನದಲ್ಲಿರಿಸಿಕೊಂಡು, ಪ್ರಸ್ತುತ ದಿನಮಾನದ ಸಂದರ್ಭದಲ್ಲಿ, ಪದವಿ ಪೂರ್ವ ಕಾಲೇಜನ್ನು ಸ್ಥಾಪಿಸುವ ಅಥವಾ ನೆಲೆಗೊಳಿಸುವ ಉದ್ದೇಶಕ್ಕಾಗಿ ಕನಿಷ್ಠ 25,000 ಚದರ ಅಡಿಗಳ ಭೂಮಿಯನ್ನು ಗೊತ್ತುಪಡಿಸಿರುವುದು ಸೂಕ್ತವೆಂದು ಯೋಚಿಸಿದೆ.4 ( 2) ( ಎ) ನಿಯಮದಲ್ಲಿರುವ ಸದರಿ ಅಗತ್ಯತೆಯು ಹೇಗೆ ಸಾಂವಿಧಾನಿಕವಾಗಿ ಅಸಿಂಧುವಾಗಿದೆ ಅಥವಾ ಅಧಿನಿಯಮದ ಉಪಬಂಧಕ್ಕೆ ವಿರುದ್ಧವಾಗಿದೆ ಎಂದು ತೋರಿಸುವ ಯಾವುದೇ ಸಂಗತಿ ಇಲ್ಲದಿರುವಲ್ಲಿ, ಅಪೀಲುದಾರರ ಪರವಾಗಿ ವಾದಿಸಿರುವಂತೆ ಸದರಿ ನಿಯಮವು ಬಿಟ್ಟುಬಿಡುವುದಕ್ಕೆ ಅರ್ಹವಾಗಿದೆ ಎಂದು ಹೇಳಲಾಗುವುದಿಲ್ಲ.

27. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ನಿರ್ಣಯಗಳಿಗೆ ಬರುವುದಾದರೆ, ಎ. ಸತ್ಯನಾರಾಯಣ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, 34 ನೇ ಕಂಡಿಕೆಯಲ್ಲಿ, ಶಾಸನಾತ್ಮಕ ಚ ನಿಯಮವು ಸಂವಿಧಾನದ ಯೋಜನೆಗೆ ಅನುಗುಣವಾಗಿರಬೇಕು ಮತ್ತು ಅದು ಅನುಚಿತ ಅಥವಾ ನಿರಂಕುಶವಾಗಿರಬಾರದು ಹಾಗೂ ತಾರ್ಕಿಕ ನಿರ್ಣಯವನ್ನು ಕೈಗೊಳ್ಳಲು ಸಮರ್ಥವಾಗಿರಬೇಕು ಎಂದು ಶಾಸನಗಳ ಅರ್ಥವಿವರಣೆಗೆ ಸಂಬಂಧಿಸಿದ ಇತ್ಯರ್ಥಗೊಂಡ ತತ್ವವನ್ನು ಪುನರುಚ್ಚರಿಸಿದೆ.4 ( 2) ( ಎ) ನಿಯಮವು ಸಾಂವಿಧಾನಿಕವಾಗಿ ಅಸಿಂಧುವಾಗಿದೆ ಅಥವಾ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿದೆ ಎಂದು ತೋರಿಸುವ ಯಾವ ಅಂಶವು ಇಲ್ಲದಿರುವಲ್ಲಿ, ನಿರ್ದಿಷ್ಟವಾಗಿ, ಮೇಲೆ ಹೇಳಿದಂತೆ ನಿಯಮಗಳು ಸ್ವಯಂ-ಪರಿಪೂರ್ಣ ಸಂಹಿತೆಯಾಗಿವೆ ಎಂಬ ಸಂಗತಿಯೊಂದಿಗೆ ಜೊತೆಗೂಡಿದ ಅಧಿನಿಯಮದ 29 ರಿಂದ 34 ರವರೆಗಿನ ಪ್ರಕರಣಗಳ ಮತ್ತು 145 ನೇ ಪ್ರಕರಣದ ಹಿನ್ನೆಲೆಯಲ್ಲಿ, ಅಪೀಲುದಾರರ ವಾದವನ್ನು ಈ ತೀರ್ಪು ಸಮರ್ಥಿಸುವುದಿಲ್ಲ.ಹಾಗಾಗಿ, ಸದರಿ ತೀರ್ಪು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

28. ವಿಪ್ರೊ ಅಮಿಟೆಡ್ (ಮೇಲೆ ಹೇಳಿದ) ಮೊಕದ್ದಮೆಯ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇತರ ತೀರ್ಪಿಗೆ ಸಂಬಂಧಪಟ್ಟಷ್ಟರಮಟ್ಟಿಗೆ, ಅದನ್ನು ಅವಲೋಕಿಸಲಾಗಿ, ವಿಶೇಷವಾಗಿ 32 ರಿಂದ 34 ರವರೆಗಿನ ಕಂಡಿಕೆಗಳು, ಸದರಿ ತೀರ್ಪನ್ನು ಸಂಪೂರ್ಣವಾಗಿ ವಿಭಿನ್ನ ಸಂಗತಿಯ ಸಂದರ್ಭದಲ್ಲಿ ನೀಡಲಾಗಿತ್ತು

ಮತ್ತು ಅದು ಪ್ರಸ್ತುತ ಮೊಕದ್ದಮೆಗೆ ಯಾವುದೇ ಸಂಬಂಧ ಹೊಂದಿರುವುದಿಲ್ಲ ಅಥವಾ ಆಧರಿಸಿರುವುದಿಲ್ಲ ಎಂಬುದನ್ನು ಸೂಚಿಸುತ್ತವೆ.ಈ ಮೊದಲೇ ಹೇಳಿರುವಂತೆ, ಪ್ರಶ್ನಿತ 4 ( 2) (   ಎ) ನಿಯಮವು, ಅಧಿನಿಯಮದ ಅಥವಾ ಭಾರತ ಸಂವಿಧಾನದ ಯಾವುದೇ ಉಪಬಂಧವನ್ನು ಉಲ್ಲಂಘಿಸಿರುವುದಿಲ್ಲ ಅಥವಾ ಅದಕ್ಕೆ ತದ್ವಿರುದ್ಧವಾಗಿ ರುವುದಿಲ್ಲವೆಂದು ತೋರಿಸುವ ಯಾವುದೇ ಅಂಶವು ಇಲ್ಲದಿರುವಲ್ಲಿ, ಅಪೀಲುದಾರ ಸಂಸ್ಥೆಯು ಅದರ ವಾದದ ಸಮರ್ಥನೆಗಾಗಿ ಈ ತೀರ್ಪನ್ನು ಸಹ ಅವಲ ಂ ಬಿಸಲಾಗುವುದಿಲ್ಲ.

29. ಮೇಲೆ ಹೇಳಿದ ಸಂದರ್ಭಗಳ ಮೇರೆಗೆ, 2006 ರ ಸದರಿ ನಿಯಮಗಳ 4 (2) (ಎ) ನಿಯಮವು, ಸಂಪೂರ್ಣವಾಗಿ ಕಾನೂನುಬದ್ಧವಾಗಿದೆ, ಸಂವಿಧಾನಬದ್ಧವಾಗಿದೆ.ಸಿಂಧುವಾಗಿದೆ, ಸಮರ್ಪಕವಾಗಿದೆ ಮತ್ತು ಅದು ಅಸಂವಿಧಾನಿಕವಾಗಿಯಾಗಲಿ ಅಥವಾ ಭಾರತ ಸಂವಿಧಾನಕ್ಕೆ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಕ್ಕೆ ವಿರುದ್ಧವಾಗಿಯಾಗಲಿ ಇಲ್ಲವೆಂದು ನಾವು ಅಭಿಪ್ರಾಯಪಡುತ್ತೇವೆ.ತದನುಸಾರವಾಗಿ ವಿವಾದಾಂಶಸಂಖ್ಯೆ: (   i) ಕ್ಕೆ ಉತ್ತರಿಸಲಾಗಿದೆ.

30. ವಿವಾದಾಂಶಸಂಖ್ಯೆ:(ii)

4 ( 2) (   ಎ) ನಿಯಮವು ಪದವಿ-ಪೂರ್ವ ಕಾಲೇಜು ಆರ್ಜಿಸಬೇಕಾದ 25,000 ಚದರ ಅಡಿಗಳ ಭೂಮಿಯ ಕನಿಷ್ಠ ಅಗತ್ಯತೆಯನ್ನು ಗೊತ್ತುಪಡಿಸುವಾಗ, ಸದರಿ ಕನಿಷ್ಠ ಅಗತ್ಯತೆಯು ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಕಾಲೇಜಿಗೆ ಅನ್ವಯವಾಗುವುದಿಲ್ಲ ಎಂಬುದು ಅಪೀಲುದಾರರ ಮುಖ್ಯ ವಾದವಾಗಿದೆ.ಈ ಸಂದರ್ಭದಲ್ಲಿ, ನಿಯಮಗಳ 4 ( 3) ನೇ ನಿಯಮವನ್ನು ಅವಲಂಬಿಸಲಾಗಿದೆ.  ಆದುದರಿಂದ, 4 ( 2) (   ಎ) ಮತ್ತು 4 ( 3) ನೇ ನಿಯಮಗಳು 25,000 ಚದರ ಅಡಿಗಳ ಕನಿಷ್ಠ ಅಗತ್ಯತೆಯು, ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಪದವಿ-ಪೂರ್ವ ಕಾಲೇಜಿಗೆ ಅನ್ವಯವಾಗುವುದಿಲ್ಲವೆಂಬುದನ್ನು ಸೂಚಿಸುತ್ತವೆ.ಎಂದು ವಾದಿಸಿದ್ದಾರೆ.ಇದಕ್ಕೆ ತದ್ವಿರುದ್ಧವಾಗಿ, ನಿಯಮಗಳಲ್ಲಿರುವ ಇತರ ಉಪಬಂಧಗಳನ್ನು, ನಿರ್ದಿಷ್ಟವಾಗಿ, ಅವುಗಳಲ್ಲಿ ಪದ್ಯಾಲೋಚಿಸಿರುವ ಯೋಜನೆಯನ್ನು ಹಾಗೂ ಅಧಿನಿಯಮ ಮತ್ತು ನಿಯಮಗಳ ಮೂಲಕ ಸಾಧಿಸಬೇಕೆಂದಿರುವ ಉದ್ದೇಶ ಮತ್ತು ಗುರಿಯನ್ನು ಗಮನದಲ್ಲಿರಿಸಿಕೊಂಡು, 11 ( 3) ನೇ ನಿಯಮ ಮತ್ತು 5 ನೇ ನಿಯಮವನ್ನು ಪರಿಶೀಲಿಸುವ ಮೂಲಕ, ಮೇಲೆ ಹೇಳಿದ ನಿಯಮಗಳಿಗೆ ಉದ್ದೇಶಪೂರ್ವಕ ಮತ್ತು ಸುಸಂಗತ ವ್ಯಾಖ್ಯಾನ/ಅರ್ಥವಿವರಣೆಯನ್ನು ನೀಡಬೇಕೆಂದು ಎದುರುದಾರರ ಪರವಾಗಿ ವಾದಿಸಲಾಗಿದೆ.

31. ಪಕ್ಷಕಾರರ ಪರಸ್ಪರ ವಾದಗಳನ್ನು ವಿಶ್ಲೇಷಿಸುವ ಸಲುವಾಗಿ, 2006 ರ ಸದರಿ ನಿಯಮಗಳ 4 ( 2) (   ಎ) ಮತ್ತು 4 ( 3) ನೇ ನಿಯಮಗಳನ್ನು ಉದ್ಧರಿಸುವುದು ಅವಶ್ಯಕವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

4. ಹೊಸ ಖಾಸಗಿ ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸುವ ಪ್ರಕ್ರಿಯೆ.( 1) XXXXXXXX

(2) ಉದ್ದೇಶ ಪತ್ರವನ್ನು ಸ್ವೀಕರಿಸಿದ ನಂತರ, ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸುವ ವ್ಯವಸ್ಥಾಪನಾ ಸಮಿತಿಯು,

(ಎ) ಉದ್ದೇಶ ಪತ್ರದ ದಿನಾಂಕದಿಂದ ಒಂದು ವರ್ಷದ ಒಳಗಾಗಿ, ಅದು ನಿರ್ಮಿಸಲು ಉದ್ದೇಶಿಸಿದ ಪ್ರಾಂಶುಪಾಲರ ಕಚೇರಿಗಳು, ತರಗತಿ ಕೊಠಡಿಗಳು, ಗ್ರಂಥಾಲಯ ಇತ್ಯಾದಿಯನ್ನು ಒಳಗೊಂಡು ಕಾಲೇಜು ಕಟ್ಟಡಕ್ಕಾಗಿ ಕನಿಷ್ಠ 25,000 ಚದರ ಅಡಿಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದು;

(3) ( 2) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳು, ಆರು ವಿಭಾಗಗಳ ಉದ್ದೇಶ ಹೊಂದಿದ್ದು, ಅದರಲ್ಲಿ ಭಾಗ- I ರಲ್ಲಿ ಎರಡು ಭಾಷಾ ವಿಷಯಗಳು ಮಾತ್ರ ಇರುತ್ತವೆ.ಭಾಗ- I ರಲ್ಲಿ ಪ್ರತಿಯೊಂದು ಹೆಚ್ಚುವರಿ ಭಾಷಾ ವಿಷಯಕ್ಕೆ ಒಂದು ಉಪನ್ಯಾಸ ಕೊಠಡಿಯನ್ನು ಮತ್ತು ಭಾಗ-II ರಲ್ಲಿ ಪ್ರತಿಯೊಂದು ಹೆಚ್ಚುವರಿ ವಿಷಯಕ್ಕೆ ಎರಡು ಉಪನ್ಯಾಸ ಕೊಠಡಿಗಳನ್ನು ಒದಗಿಸತಕ್ಕದ್ದು.

32. ಇಡೀ ವಿವಾದವು, " ( 2) ನೇ ಉಪ-ನಿಯಮದಲ್ಲಿ " ಪದಗಳ ನಂತರ 4 ( 3) ನೇ ನಿಯಮದ 1 ನೇ ಸಾಲಿನಲ್ಲಿ ಕಂಡುಬರುವ " ಆರು ವಿಭಾಗಗಳ ಉದ್ದೇಶ ಹೊಂದಿದೆ " ಎಂಬ ಪದಗಳ ಸುತ್ತ ಸುತ್ತುತ್ತಿದೆ.

33. 4 ( 3) ನೇ ನಿಯಮದ ಸರಳ ಓದುವಿಕೆಯು, ಅಪೀಲುದಾರರ ಪರವಾಗಿ ಮಂಡಿಸಿದ ಪ್ರಾಥಮಿಕ ವಾದವು, ಸದರಿ ನಿಯಮದಲ್ಲಿ ಕಂಡುಬರುವ 66 " ಆರು ವಿಭಾಗಗಳ ಉದ್ದೇಶ ಹೊಂದಿದೆ " ಎಂಬ ಪದಗಳನ್ನು ಕುರಿತು ಒತ್ತು ನೀಡುತ್ತದೆ ಎಂಬುದನ್ನು ಸೂಚಿಸುತ್ತದೆ.ಪದವಿಪೂರ್ವ ಕಾಲೇಜು ಕನಿಷ್ಠ ಆರು ವಿಭಾಗಗಳನ್ನು ಒಳಗೊಂಡಿರದ ಹೊರತು, 4 ( 2) ( ಎ) ನಿಯಮದಲ್ಲಿರುವ ಕನಿಷ್ಠ ಅಗತ್ಯತೆಗಳು ಅನ್ವಯವಾಗುವುದಿಲ್ಲವೆಂದು ವಾದಿಸಲು ಈ ಪದಗಳನ್ನು ಅರ್ಥೈಸಬೇಕಿದೆ.ಅಪೀಲುದಾರನ ಪರವಾಗಿ ಮಂಡಿಸಲಾದ ಈ ವಾದವು, ಈ ಮುಂದಿನ ಕಾರಣಗಳಿಗಾಗಿ ತಳ್ಳಿಹಾಲು ಯೋಗ್ಯವಾಗಿದೆ:

(ಎ) 4 ( 2) ನೇ ಮತ್ತು 4 ( 3) ನೇ ನಿಯಮದ ಓದುವಿಕೆಯು, 4 ( 2) ( ಎ) ನಿಯಮದಲ್ಲಿ ಗೊತ್ತುಪಡಿಸಿದ ಭೂಮಿಯ ವಿಸ್ತೀರ್ಣದ ಕನಿಷ್ಠ ಅಗತ್ಯತೆ ಮತ್ತು ನಿರ್ಮಿತ/ಸ್ಥಾಪಿತ ಕ್ಷೇತ್ರ ವಿಸ್ತೀರ್ಣದ ಕನಿಷ್ಠ ಅಗತ್ಯತೆ ಹಾಗೂ 4 ( 2) (ಬಿ) ನಿಯಮದಲ್ಲಿ ಗೊತ್ತುಪಡಿಸಿದ ಇತರ ಸೌಲಭ್ಯಗಳು, ಆರು ವಿಭಾಗಗಳನ್ನು ಹೊಂದಿರುವ (ಎಂದರೆ ಒಂದನೇ ವಿಭಾಗದಿಂದ ಆರು ವಿಭಾಗಗಳವರೆಗೆ ಮತ್ತು ಭಾಗ-I ರಲ್ಲಿ ಭಾಷಾ ವಿಷಯಗಳನ್ನು ಒಳಗೊಂಡಿರುವ ಯಾವುದೇ ಪದವಿ-ಪೂರ್ವ ಕಾಲೇಜಿಗೆ ಕನಿಷ್ಠ ಅಗತ್ಯತೆಯನ್ನು ರೂಪಿಸುತ್ತದೆ ಎಂಬುದನ್ನು ತೋರಿಸುತ್ತದೆ.4 ( 3) ನೇ ನಿಯಮವು ಸಹ, ಭಾಗ- I ರಲ್ಲಿ ಪ್ರತಿಯೊಂದು ಹೆಚ್ಚುವರಿ ಭಾಷಾ ವಿಷಯಕ್ಕೆ ಒಂದು ಹೆಚ್ಚುವರಿ ಉಪನ್ಯಾಸ ಕೊಠಡಿ ಇರಬೇಕು ಮತ್ತು ಭಾಗ-II ರಲ್ಲಿ ಪ್ರತಿಯೊಂದು ಹೆಚ್ಚುವರಿ ವಿಷಯಕ್ಕೆ ಎರಡು ಹೆಚ್ಚುವರಿ ಉಪನ್ಯಾಸ ಕೊಠಡಿಗಳನ್ನು ಒದಗಿಸಬೇಕೆಂಬುದನ್ನು ಗೊತ್ತುಪಡಿಸುತ್ತದೆ.ಹೆಚ್ಚುವರಿ ಕೊಠಡಿಗಳ ಈ ಅಗತ್ಯತೆಯು, ಸಹಜವಾಗಿಯೇ 4 ( 2) (ಬಿ) ನಿಯಮಕ್ಕೆ ಸಂಬಂಧಿಸಿದ್ದು, ಹೆಚ್ಚುವರಿ ವಿಭಾಗಗಳಿಗೆ 4 ( 3) ನೇ ನಿಯಮದ ಪ್ರಕಾರ 25,000 ಚದರ ಅಡಿಗಳಿಗೆ ಹೆಚ್ಚುವರಿಯಾಗಿ ಹೆಚ್ಚಿನ ಭೂಮಿಯನ್ನು ಅಗತ್ಯಪಡಿಸಿಲ್ಲವಾದ್ದರಿಂದ 4 ( 2) ( ಎ) ನಿಯಮಕ್ಕೆ ಸಂಬಂಧಿಸಿರುವುದಿಲ್ಲ.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, 4 ( 3) ನೇ ನಿಯಮವು ಗೊತ್ತುಪಡಿಸುವುದೇನೆಂದರೆ, 4 ( 2) ( ಎ) ನಿಯಮದಲ್ಲಿ ಪರ್ಯಾಲೋಚಿಸಿದಂತೆ ಕನಿಷ್ಠ 25,000 ಚದರ ಅಡಿ ಭೂಮಿಯು 1 ಕ್ಕಿಂತ ಹೆಚ್ಚು ಚ ವಿಭಾಗಗಳನ್ನು ಹೊಂದಿರುವ ಎಲ್ಲಾ ಪದವಿ-ಪೂರ್ವ ಕಾಲೇಜುಗಳಿಗೆ ಕಡ್ಡಾಯ ಅಗತ್ಯತೆಯಾಗಿದ್ದು, 4 ( 2) (ಬಿ) ನಿಯಮದಲ್ಲಿ ಕಂಡುಬರುವ ಕನಿಷ್ಠ ಅಗತ್ಯತೆಗಿಂತ ಹೆಚ್ಚುವರಿ ಉಪನ್ಯಾಸ ಕೊಠಡಿಗಳು, 4 ( 3) ನೇ ನಿಯಮದಲ್ಲಿ ಪರ್ಯಾಲೋಚಿಸಿದಂತೆ ಹೆಚ್ಚುವರಿ ಉಪನ್ಯಾಸ ಕೊಠಡಿಗಳಿದ್ದರೆ ಮಾತ್ರ ಅಗತ್ಯವಾಗುವವು.

ಬಿ) " ಆರು ವಿಭಾಗಗಳ ಉದ್ದೇಶ ಹೊಂದಿದೆ " ಎಂಬ ಪದಗಳನ್ನು, 4 ( 2) ( ಎ) ನಿಯಮದಲ್ಲಿರುವ ಕಡ್ಡಾಯ ಅಗತ್ಯತೆಗಳು, ಆರಕ್ಕಿಂತ ಹೆಚ್ಚು ವಿಭಾಗಗಳಿರುವ ಚ ಸಂದರ್ಭದಲ್ಲಿ ಹೆಚ್ಚುವರಿ ಮೂಲಸೌಕಯ್ಯಕ್ಕೆ ಮೇಲಿನ ಮಿತಿಯಿರುವುದಿಲ್ಲದಿರುವ ಆರು ವಿಭಾಗಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಅರ್ಥ ಎಂಬುದಾಗಿ ತಿಳಿದುಕೊಳ್ಳಬೇಕಾಗುತ್ತದೆ.ಶಾಸಕಾಂಗವು ಜಾಣ್ಮೆಯಿಂದ, ಆರು ವಿಭಾಗಗಳನ್ನು ಒಳಗೊಂಡಿರುವ ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸಲು ಕನಿಷ್ಠ ಮೂಲಸೌಕಯ್ಯ ಅಗತ್ಯತೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ವಿಶದವಾಗಿ ವಿಧಿಸಿದೆ ಮತ್ತು ಆರಕ್ಕಿಂತ ಹೆಚ್ಚು ವಿಭಾಗಗಳಿದ್ದ ಸಂದರ್ಭದಲ್ಲಿ, ಹೆಚ್ಚುವರಿ ಮೂಲಸೌಕಯ್ಯಗಳನ್ನು ಸೇರಿಸಲು ಸಂಬಂಧಪಟ್ಟ ಕಾಲೇಜುಗಳಿಗೆ ಸದಾ ಅವಕಾಶವಿರುತ್ತದೆ.ಆದುದರಿಂದ, ಆರು ವಿಭಾಗಗಳು ಇದ್ದ ಹೊರತು, 4 ( 2) (ಎ) ನಿಯಮದಲ್ಲಿ ಉಪಬಂಧಿಸಿದ 25,000 ಚದರ ಅಡಿಗಳ ಕನಿಷ್ಠ ಅಗತ್ಯತೆಗಳು ಅನ್ವಯವಾಗುವುದಿಲ್ಲವೆಂದು ಹೇಳಲಾಗುವುದಿಲ್ಲ.

ಸಿ) ಸದರಿ ಉಪಬಂಧವನ್ನು ಪರೀಕ್ಷಿಸುವ ಮತ್ತೊಂದು ವಿಧಾನವಿದೆ.ನಿಯಮಗಳ ಅವಲೋಕನದಿಂದ, ಅದರಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಹೊರತುಪಡಿಸಿ, ಪದವಿ-ಪೂರ್ವ ಕಾಲೇಜುಗಳ ಸ್ಥಾಪನೆ, ಮಾನ್ಯತೆ, ನಿಯಂತ್ರಣ ಮತ್ತು ಬೋಧನಾ ವಿಷಯದ ಉದ್ದೇಶಕ್ಕಾಗಿ ಯಾವುದೇ ಇತರ ನಿಯಮಗಳು ಅನ್ವಯವಾಗುವುದಿಲ್ಲವೆಂಬುದು ಸೂಚಿತವಾಗುತ್ತದೆ.4 ( 2) ನೇ ನಿಯಮವು, ಆರಕ್ಕಿಂತ ಕಡಿಮೆ ವಿಭಾಗಗಳನ್ನು ಒಳಗೊಂಡಿರುವ ಕಾಲೇಜುಗಳಿಗೆ ಅನ್ವಯವಾಗದಿದ್ದರೆ, ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಯಾವುದೇ ಕಾಲೇಜನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಮಾನದಂಡಗಳು, ಪ್ರಕ್ರಿಯೆಗಳು ಮತ್ತು ಕಾರವ್ಯವಸ್ಥೆಗಳು ಕಂಡುಬರುವುದಿಲ್ಲ ಅಥವಾ ಅಧಿನಿಯಮದಲ್ಲಿ ಅಥವಾ ನಿಯಮಗಳಲ್ಲಿ ಎಲ್ಲಿಯೂ ಉಪಬಂಧಿಸಿರುವುದಿಲ್ಲ ಎಂದಾಗುತ್ತದೆ.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಕಾಲೇಜಿಗೆ ಸಂಬಂಧಿಸಿದಂತೆ ಅಧಿನಿಯಮ ಅಥವಾ ನಿಯಮಗಳು ಸಂಪೂರ್ಣವಾಗಿ ಮೌನವಾಗಿವೆ ಎಂದಾಗುತ್ತದೆ.ಆರಕ್ಕಿಂತ ಕಡಿಮೆ ವಿಭಾಗಗಳನ್ನು ಒಳಗೊಂಡಿರುವ ಕಾಲೇಜಿಗೆ 4 ( 2) ನೇ ನಿಯಮವು ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟರೆ, ಆಗ ವಾಸ್ತವವಾಗಿ ಮೂಲಸೌಕಯ್ಯ ಹೊಂದುವ ಪರಿಭಾಷೆಯಂತೆ ನಿಯಮಗಳ ಅಡಿಯಲ್ಲಿ ಯಾವುದೇ ಇತರ ಅಗತ್ಯವಿರುವುದೇ ಇಲ್ಲ. ಅಂಥ ಅರ್ಥವಿವರಣೆಯು, ಮೂಲಸೌಕರ್ಯ್ಯ ಅಥವಾ ತರಗತಿ ಕೊಠಡಿಗಳು ಅಥವಾ ಗ್ರಂಥಾಲಯವನ್ನು ಆರಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಿರುವ ಪದವಿ-ಪೂರ್ವ ಕಾಲೇಜನ್ನು ಪ್ರಾರಂಭಿಸಲು ಒದಗಿಸಬೇಕಾಗಿರದ ಅಸಂಗತ ಸನ್ನಿವೇಶಕ್ಕೆಡೆ ಮಾಡಿಕೊಡುತ್ತದೆ.ಶಾಸನಾತ್ಮಕ ಉದ್ದೇಶವನ್ನು ಹಾಗೆ ಅಸಂಗತವಾಗಿರಬೇಕೆಂಬುದಾಗಿ ಅರ್ಥೈಸಲಾಗುವುದಿಲ್ಲ.

ಡಿ) ಸಹಜವಾಗಿಯೇ ಈ ಅರ್ಥವಿವರಣೆಯು, ನಿರ್ದಿಷ್ಟವಾಗಿ, ನಿಯಮಗಳನ್ನು, ಸದರಿ ಉದ್ದೇಶದೊಂದಿಗೆ 145 ನೇ ಪ್ರಕರಣದ ( 1) ನೇ ಮತ್ತು ( 2) (xiii) ಮತ್ತು(xiv) ನೇ ಉಪ-ಪ್ರಕರಣಗಳ ಅಡಿಯಲ್ಲಿ ರೂಪಿಸಲಾಗಿತ್ತು ಎಂಬ ಸಂಗತಿಯನ್ನು ಗಮನದಲ್ಲಿರಿಸಿಕೊಂಡು, ಶಾಸಕಾಂಗವು ಉದ್ದೇಶಿಸಿರದಿದ್ದ, ಅಸಂಗತ ಮತ್ತು ಅಸಂಬದ್ಧ ಪರಿಣಾಮಗಳಿಗೆ ದಾರಿ ಮಾಡಿಕೊಡುತ್ತದೆ.ಈ ಸಂದರ್ಭಗಳ ಮೇರೆಗೆ, 4 ( 2) ( ಎ) ಮತ್ತು ( 3) ನೇ ನಿಯಮದ ಮೇರೆಗೆ ಅವಕಾಶ ಕಲ್ಪಿಸಬೇಕಾದ ಉದ್ದೇಶಪೂರ್ವಕ, ಸಾಮರಸ್ಯ ಪೂರ್ವಕ ಮತ್ತು ಯುಕ್ತ ರಚನೆ| ಅರ್ಥವಿವರಣೆಯೆಂದರೆ, ಪ್ರಥಮತಃ ಒಂದು ಪದವಿ-ಪೂರ್ವ ಕಾಲೇಜು, ಆರು ವಿಭಾಗಗಳನ್ನು ಒದಗಿಸಬೇಕೆಂಬ ಮತ್ತು ಸದರಿ ಅಗತ್ಯತೆಗಳು, ಹೆಚ್ಚುವರಿ ವಿಭಾಗಗಳಿಗಾಗಿ ಹೆಚ್ಚುವರಿ ಮೂಲಸೌಕಯ್ಯಗಳ ಆಯ್ಕೆಯೊಂದಿಗೆ ಸದರಿ ಆರು ವಿಭಾಗಗಳನ್ನು ಒದಗಿಸಬೇಕೆಂಬ ಪೂರ್ವಭಾವನೆಯ ಆಧಾರದ ಮೇಲೆ 4 (2) ನೇ ನಿಯಮದ

ಅಡಿಯಲ್ಲಿ ಉಪಬಂಧಿಸಿದ ಕನಿಷ್ಠ ಮೂಲಸೌಕಯ್ಯ ಅಗತ್ಯತೆಗಳನ್ನು ನಿಯಮಿಸಲು ಉದ್ದೇಶಿಸಿದೆ ಎಂಬುದಾಗಿದೆ.

ಇ) 4 ( 5) ರಿಂದ 4 ( 8) ರವರೆಗಿನ ನಿಯಮಗಳ ಅವಲೋಕನವು, 4 ( 2) ನೇ ನಿಯಮದಲ್ಲಿ ಕಂಡುಬರುವ ಕನಿಷ್ಠ ಭೂಮಿ ಅಷ್ಟೇ ಅಲ್ಲದೆ ಕನಿಷ್ಠ ಕಟ್ಟಡದ ದುಪ್ಪಟ್ಟು ಅಗತ್ಯತೆಯು ನಿರುಪಾಧಿಕವಾಗಿ ಕಡ್ಡಾಯವಾದವುಗಳೆಂದು ಮತ್ತು ಪದವಿ-ಪೂರ್ವ ಕಾಲೇಜನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಅನುಪಾಲನೆಗಳನ್ನು ಅಗತ್ಯತೆಗಳನ್ನು ಈಡೇರಿಸುವುದಕ್ಕಾಗಿ ಹಾಗೂ ಅದಕ್ಕೆ ರಾಜ್ಯ ಸರ್ಕಾರವು ಅನುಮತಿ ಮತ್ತು ಮಾನ್ಯತೆ ನೀಡಬೇಕೆಂಬುದು ಅಗತ್ಯವಾಗಿದೆ ಎಂಬುದನ್ನು ಸಹ ಸೂಚಿಸುತ್ತದೆ.4 ( 5) ರಿಂದ 4 ( 8) ರವರೆಗಿನ ನಿಯಮಗಳಲ್ಲಿ ' ಭೂಮಿ ' ಎಂಬ ಪುನರಾವರ್ತಿತ ಪದಗಳ ಉಲ್ಲೇಖವು, 4 ( 2) ( ಎ) ನಿಯಮದಲ್ಲಿ ಕಂಡುಬರುವ 25,000 ಚದರ ಅಡಿ ಭೂಮಿಯ ಕನಿಷ್ಠ ಅಗತ್ಯತೆಯು, ರಾಜ್ಯ ಸರ್ಕಾರದಿಂದ ಅನುಮತಿ ಮತ್ತು ಮಾನ್ಯತೆ ಕೋರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ, ಕಾಲೇಜಿನಲ್ಲಿ ನಡೆಯುವ ವಿಭಾಗಗಳ ಸಂಖ್ಯೆ ಎಷ್ಟೇ ಇರಲಿ ಅನ್ವಯವಾಗುತ್ತದೆ ಎಂಬುದನ್ನು ತೋರಿಸಲು ಪರಾಪ್ತವಾಗಿದೆ.

ಎಫ್) 4 ( 2) ನೇ ನಿಯಮದಲ್ಲಿ ಕಂಡುಬರುವ ಭೂಮಿ ಮತ್ತು ಕಟ್ಟಡಕ್ಕೆ ಸಂಬಂಧಿಸಿದ ಕನಿಷ್ಠ ಮೂಲಸೌಕಯ್ಯದ ಅಗತ್ಯತೆಗಳನ್ನು ಪಾಲಿಸುವುದಕ್ಕೆ ಒಳಪಟ್ಟು, ಒಂದು ಕಾಲೇಜು 3 ಕ್ಕಿಂತ ಕಡಿಮೆ ವಿಭಾಗಗಳನ್ನು ಹೊಂದಬಹುದು ಎಂದು ಸೂಚಿಸಿ, ಆ ಮೂಲಕ ಪ್ರಾರಂಭದಲ್ಲಿ ಒಂದು ಪದವಿ-ಪೂರ್ವ ಕಾಲೇಜು ವಿದ್ಯಾರ್ಥಿ ಸಂಖ್ಯೆ ಮತ್ತು ವಿಷಯಗಳ ಸಂಯೋಜನೆಗೆ ಸಂಬಂಧಿಸಿದಂತೆ ಮೂರು ವಿಭಾಗಗಳನ್ನು ಹೊಂದಬಹುದೆಂಬುದನ್ನು ಸಹ II ( 3) ನೇ ನಿಯಮವು ನಿಗದಿಪಡಿಸುತ್ತದೆ.ಒಂದು ಕಾಲೇಜು ಕನಿಷ್ಠ 6 ವಿಭಾಗಗಳನ್ನು ಹೊಂದಿದ್ದರೆ ಮಾತ್ರ 4 ( 2) ( ಎ) ನಿಯಮವನ್ನು ಅನ್ವಯಿಸುವುದಾದರೆ, ಆಗ 11 ( 3) ನೇ ಹಾಗೂ 4 ( 4) ರಿಂದ 4 ( 8) ರವರೆಗಿನ ನಿಯಮಗಳು ಮತ್ತು ಇತರ ತತ್ಸಂಬಂಧಿ ನಿಯಮಗಳು ನಿಷ್ಪ್ರಯೋಜಕವಾಗುವವು, ಅದು ಖ ಂ ಡಿತವಾಗಿಯೂ ಶಾಸಕಾ ಂ ಗದ ಉದ್ದೇಶವಾಗಿರಲಿಲ್ಲ.

ಜಿ) 4 ( 3) ನೇ ನಿಯಮದ ಅವಲೋಕನವು, ಪದವಿಪೂರ್ವ ಕಾಲೇಜಿನಲ್ಲಿ ಕಲಿಸಬೇಕಾದ ವಿಷಯಗಳ ಸಂಖ್ಯೆಗೆ ಮತ್ತು ಭಾಷಾ ವಿಷಯಗಳ ಸಂಖ್ಯೆಗೆ ಸಂಬಂಧಿಸಿದಂತೆ ಆರು ವಿಭಾಗಗಳನ್ನು ಒದಗಿಸುವುದರ ಬಗ್ಗೆ ಒತ್ತು ನೀಡಲಾಗುತ್ತದೆ ೧ ಎಂಬುದನ್ನು ಸಹ ಸೂಚಿಸುತ್ತದೆ.ಆದುದರಿಂದ, ಅಂಥ ಸಂದರ್ಭದಲ್ಲಿ ಹೆಚ್ಚುವರಿ ಭಾಷೆಗಳನ್ನು ಕಲಿಸಬೇಕಾಗುತ್ತದೆ ಅಥವಾ ಹೆಚ್ಚುವರಿ ವಿಷಯಗಳನ್ನು ಕಲಿಸಬೇಕಾಗುತ್ತದೆ, ಹೆಚ್ಚುವರಿ ಉಪನ್ಯಾಸ ಕೊಠಡಿಗಳನ್ನು ಕಾಲೇಜು ಒದಗಿಸಬೇಕಾಗುತ್ತದೆ.ಹೆಚ್ಚುವರಿ ಉಪನ್ಯಾಸ-ಕೊಠಡಿಗಳನ್ನು ಒದಗಿಸುವ ಈ ಅಗತ್ಯತೆಯನ್ನು, 4 ( 2) (ಬಿ) ನಿಯಮದಲ್ಲಿ ಕಂಡುಬರುವ ಮತ್ತು 4 ( 2) ( ಎ) ನಿಯಮದಲ್ಲಿ ಕಂಡುಬರುವ 25,000 ಚದರ ಅಡಿಗಳ ಕನಿಷ್ಠ ಅಗತ್ಯತೆಯಾಗಿರದ ಮೂಲಸೌಕಯ್ಯ ಸೌಲಭ್ಯಗಳಿಗೆ ಸಂಬಂಧ ಕಲ್ಪಿಸಬಹುದಾಗಿದೆ.ಇನ್ನೊಂದು ರೀತಿಯಲ್ಲಿ, 4 ( 2) ನೇ ಮತ್ತು 4 ( 3) ನೇ ನಿಯಮದ ಸಾಮರಸ್ಯಪೂರ್ಣ ಓದುವಿಕೆಯು/ರಚನೆಯು, 4 ( 2) ನೇ ನಿಯಮವು ಭೂಮಿಯ ಕನಿಷ್ಠ ವ್ಯಾಪ್ತಿ ಹಾಗೂ ಕನಿಷ್ಠ ನಿರ್ಮಾಣ ಮತ್ತು ಮೂಲಸೌಕಯ್ಯ ಕುರಿತು ವ್ಯವಹರಿಸಿದರೆ, 4 ( 3) ನೇ ನಿಯಮವು ವಾಸ್ತವವಾಗಿ 4 ( 2) (ಬಿ) ನಿಯಮದಲ್ಲಿ ಉಪಬಂಧಿಸಿದ ಕನಿಷ್ಠ ನಿರ್ಮಾಣ ಮತ್ತು ಮೂಲಸೌಕಯ್ಯಕ್ಕೆ ಸಂಬಂಧಿಸಿದ್ದಾಗಿರುತ್ತದೆಯೇ ಹೊರತು, 4 ( 2) ( ಎ) ನಿಯಮದಲ್ಲಿ ಕಂಡುಬರುವ ಕನಿಷ್ಠ ಭೂಮಿಯ ವ್ಯಾಪ್ತಿಗೆ ಅಲ್ಲ ಎಂಬುದನ್ನು ಸೂಚಿಸುತ್ತದೆ.

ಹೆಚ್) ನಿಯಮಗಳ ಅವಲೋಕನವು, ಮೇಲೆ ಹೇಳಿದಂತೆ, ಹೊಸ ಪದವಿ-ಪೂರ್ವ ಕಾಲೇಜಿನ ಸ್ಥಾಪನೆ ಮತ್ತು ಮಾನ್ಯತೆಗೆ ಸಂಬಂಧಿಸಿದ ಇಡೀ ಕಾರವಿಧಾನವು ಇತರ ನಿಯಮಗಳೊಂದಿಗೆ 4 ನೇ ನಿಯಮದಲ್ಲಿ ಕಂಡುಬರುತ್ತದೆ ಎಂಬುದನ್ನು ಸೂಚಿಸುತ್ತದೆ.ಈ ನಿಯಮಗಳು ಜಾರಿಗೆ ಬಂದದಿನಾಂಕ: 09.10.2006 ಕ್ಕೆ ಮೊದಲು ಅಸ್ತಿತ್ವದಲ್ಲಿದ್ದಂಥ ಪ್ರಸ್ತುತ ಇರುವ ಪದವಿಪೂರ್ವ ಕಾಲೇಜುಗಳ ಸಂದರ್ಭದಲ್ಲೂ ಸಹ, ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಒಳಗಾಗಿ ಸದರಿ ಪದವಿಪೂರ್ವ ಕಾಲೇಜುಗಳು 4 ( 2) ನೇ ನಿಯಮದಲ್ಲಿ ಕಂಡುಬರುವ ಅಗತ್ಯತೆಗಳನ್ನು ಪಾಲಿಸಬೇಕೆಂಬುದನ್ನು ನಿಯಮಗಳ 5 ನೇ ನಿಯಮವು ಕಡ್ಡಾಯಪಡಿಸುತ್ತದೆ.ಈ ಸಂದರ್ಭವು, ಎಲ್ಲಾ ಪದವಿ-ಪೂರ್ವ ಕಾಲೇಜುಗಳು ಈ ನಿಯಮಗಳು ಜಾರಿಗೆ ಬರುವ ಮೊದಲು ಅಥವಾ ನಂತರ ಸ್ಥಾಪನೆಯಾಗಿರಲಿ, ಸದರಿ ಕಾಲೇಜಿನಲ್ಲಿ ಅಸ್ತಿತ್ವದಲ್ಲಿದ್ದಂಥ ವಿಭಾಗಗಳ ಸಂಖ್ಯೆ ಏನೇ ಆಗಿರಲಿ, 4 ( 2) ( ಎ) ಮತ್ತು (ಬಿ) ನಿಯಮದ ಕಡ್ಡಾಯ ಅಗತ್ಯತೆಯನ್ನು ಪಾಲಿಸಬೇಕೆಂಬುದನ್ನು ಸಹ ಸೂಚಿಸುತ್ತದೆ.5 ನೇ ನಿಯಮದಲ್ಲಿ 4 ( 3) ನೇ ನಿಯಮದ ಅನುಪಸ್ಥಿತಿ/ಉಲ್ಲೇಖ ಇಲ್ಲದಿರುವಿಕೆಯು, 4 ( 2) ( ಎ) ಮತ್ತು (ಬಿ) ನಿಯಮವು ವಿಭಾಗಗಳ ಸಂಖ್ಯೆಯ ಉಲ್ಲೇಖವಿರದೆ ಎಲ್ಲಾ ಕಾಲೇಜುಗಳಿಗೆ ಅನ್ವಯವಾಗುವುದು ಎಂಬ ನಿರ್ಣಯಕ್ಕೆ ಬರಲು ಅತ್ಯಂತ ನಿರ್ಣಾಯಕ ಸಂದರ್ಭಗಳಾಗಿವೆ.

ಐ) ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ವಿವಿಧ ತೀರ್ಪುಗಳು, ಶಾಸನಗಳ ಅರ್ಥವಿವರಣೆ ಕುರಿತು ವ್ಯವಹರಿಸುತ್ತವೆ ಮತ್ತು ಸರ್ವೋಚ್ಚ ನ್ಯಾಯಾಲಯವು ನೀಡಿದ ಸದರಿ ತೀರ್ಪುಗಳಲ್ಲಿ ವಿಧಿಸಿದ ತತ್ವಗಳೊಂದಿಗೆ ನಿರುಪಾಧಿಕವಾಗಿ ಯಾವುದೇ ವಿವಾದವಿರುವುದಿಲ್ಲ.ಆದಾಗ್ಯೂ, ಸದರಿ ನಿಯಮಗಳ ( 2) ನೇ ಮತ್ತು 4 ( 3) ನೇ ನಿಯಮಗಳನ್ನು ಕುರಿತು ನಾವು ನೀಡಿದ ಮೇಲೆ ಹೇಳಿದ ಅರ್ಥವಿವರಣೆಯು, ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪುಗಳನ್ನು ಒಳಗೊಂಡಂತೆ ಹಲವಾರು ತೀರ್ಪುಗಳಲ್ಲಿನ ಶಾಸನಾತ್ಮಕ ಉಪಬಂಧಗಳ ಸುಸಂಗತತೆಗೆ, ಉದ್ದೇಶಪೂರ್ವಕತೆಗೆ ಮತ್ತು ಯುಕ್ತ ಅರ್ಥವಿವರಣೆಗೆ/ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದೊಂದಿಗೆ ಅನುರೂಪವಾಗಿದೆ.

34. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, 4 ( 2) ನೇ ಮತ್ತು 4 ( 3) ನೇ ನಿಯಮಗಳನ್ನು 2006 ರ ಸದರಿ ನಿಯಮಗಳ 4 ( 2) ( ಎ) ನಿಯಮದಲ್ಲಿ ಕಂಡುಬರುವ 25,000 ಚದರ ಅಡಿಗಳ ಭೂಮಿಯನ್ನು ಒದಗಿಸುವ ಕನಿಷ್ಠ ಅಗತ್ಯತೆಯು, ಕಾಲೇಜಿನಲ್ಲಿರುವ ವಿಭಾಗಗಳ ಸಂಖ್ಯೆ ಏನೇ ಇರಲಿ, ಎಲ್ಲಾ ಪದವಿ-ಪೂರ್ವ ಕಾಲೇಜುಗಳಿಗೆ ಅನ್ವಯವಾಗುತ್ತದೆ ಹಾಗೂ 4 ( 2) ನೇ ಮತ್ತು 4 ( 3) ನೇ ನಿಯಮಗಳನ್ನು ತದನುಸಾರವಾಗಿ ಗ್ರಹಿಸಿ, ಅರ್ಥೈಸಿಕೊಳ್ಳಬೇಕು ಎಂಬ ಅರ್ಥಕ್ಕೆ ಸಮನ್ವಯಗೊಳಿಸಬೇಕು ಮತ್ತು ಅರ್ಥೈಸಿಕೊಳ್ಳಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ.

35. ಈ ಸಂದರ್ಭದಲ್ಲಿ, ಪ್ರಸ್ತುತ ಅಪೀಲು ಇತ್ಯರ್ಥದಲ್ಲಿರುವಾಗ, 4 ( 2) ( ಎ) ನಿಯಮವನ್ನುದಿನಾಂಕ: 11.10.2018 ರಂದು ತಿದ್ದುಪಡಿ ಮಾಡಲಾಗಿದೆ ಎಂದು ಹೇಳಬೇಕಾಗುತ್ತದೆ ಮತ್ತು ಅದನ್ನು ಈ ಕೆಳಗಿನಂತೆ ಓದಲಾಗಿದೆ:

3. 4 ನೇ ನಿಯಮದ ತಿದ್ದುಪಡಿ-ಸದರಿ ನಿಯಮಗಳ 4 ನೇ ನಿಯಮದಲ್ಲಿ:

( 1) ( 2) ನೇ ಉಪ-ನಿಯಮ,

( i) (  ಎ) ಖಂಡದಲ್ಲಿ, " ಕನಿಷ್ಠ 25,000 ಚದರ ಅಡಿ ಭೂಮಿಯನ್ನು ಆರ್ಜಿಸಕ್ಕದ್ದು " ಎಂಬ ಪದಗಳ ಮತ್ತು ಸಂಖ್ಯೆಗಳ ನಂತರ,

" ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮದ ವಿಧಿಸುವಿಕೆ, ಇತ್ಯಾದಿ) ನಿಯಮಗಳು, 1995 ರ ಪ್ರಕಾರ, ಭೂಮಿಯ ಕನಿಷ್ಠ ಹೊಂದಿಕೊಂಡಿರುವ ಭೂಮಿಯ ವ್ಯಾಪ್ತಿಯನ್ನು ಅರ್ಜಿಸಿರತಕ್ಕದ್ದು ಅಥವಾ ಕನಿಷ್ಠಪಕ್ಷ 30 ವರ್ಷಗಳಿಗಾಗಿ ಗುತ್ತಿಗೆಗೆ ತೆಗೆದುಕೊಂಡಿರತಕ್ಕದ್ದು " ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು."

36. ಈ ತಿದ್ದು ಪಡಿಯು ಪ್ರಸ್ತುತ ಅಪೀಲನ್ನು ಸಲ್ಲಿಸಿದ ನಂತರ ಜಾರಿಗೆ ಬಂದಿದೆ ಎಂಬ ಅವಿವಾದಿತ ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂಬುದನ್ನು ನಾವು ಈ ಮೂಲಕ ಸ್ಪಷ್ಟಪಡಿಸುತ್ತೇವೆ.ಮೇಲೆ ಹೇಳಿದ ತಿದ್ದುಪಡಿ ಜಾರಿಗೆ ಬರುವ ಮೊದಲು ಇದ್ದಂಥ 4 ( 2) (  ಎ) ನಿಯಮದ ಅರ್ಥವಿವರಣೆಗೆ ಈ ಆದೇಶವು ಸೀಮಿತವಾಗಿದೆ ಮತ್ತು ತಿದ್ದುಪಡಿಯಾದ ನಿಯಮಗಳನ್ನು ಕುರಿತು ನಾವು ವ್ಯವಹರಿಸಿರುವುದಿಲ್ಲ ಅಥವಾ ಅರ್ಥೈಸಿರುವುದಿಲ್ಲ.(ii) ನೇ ವಿವಾದಾಂಶಕ್ಕೆ ತದನುಸಾರವಾಗಿ ಉತ್ತರಿಸಲಾಗಿದೆ.

37. ವಿವಾದಾಂಶ ಸಂಖ್ಯೆ(iii)

ಎದುರುದಾರರ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು, 4 ( 3) ನೇ ನಿಯಮದಲ್ಲಿನ (ಬಿ) ಅಕ್ಷರವನ್ನು, 4 ( 3) ನೇ ನಿಯಮದ ಮೊದಲ ಸಾಲಿನಲ್ಲಿ ಕಂಡುಬರುವ ( 2) ನೇ ಉಪ-ನಿಯಮದ ಉಲ್ಲೇಖದೊಂದಿಗೆ 4 ( 3) ನೇ ನಿಯಮದ ಕರಡು ರಚನೆ ಮಾಡುವಾಗ ತಪ್ಪಾಗಿ, ಕಣ್ತಪ್ಪಿನಿಂದ ಮತ್ತು ನಿರ್ಲಕ್ಷ್ಯದಿಂದ ಬಿಟ್ಟುಬಿಡಲಾಗಿದೆ ಹಾಗೂ 4 ( 3) ನೇ ನಿಯಮವನ್ನು ವಾಸ್ತವವಾಗಿ " 66 ( 2) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳನ್ನು " ಎಂಬುದಕ್ಕೆ ಬದಲಾಗಿ " ( 2) (ಬಿ) ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳನ್ನು " " ಎಂದು ಓದಬೇಕು ಎಂದು ವಾದಿಸಿದ್ದಾರೆ.ಆದುದರಿಂದ ಎದುರುದಾರರು, 4 ( 3) ನೇ ನಿಯಮದಲ್ಲಿ (ಬಿ) ಅಕ್ಷರವನ್ನು ಸೇರಿಸಲು ಸದರಿ ಬಿಟ್ಟುಬಿಡುವಿಕೆಯು, ಶಾಸಕಾಂಗದ ಕಡೆಯಿ ಂ ದಾದ ಅಂತರ್ಗತ ವಿಷಯದ ಸಂದರ್ಭವಾಗಿದೆ ಮತ್ತು ಅಂಥ ಸಂದರ್ಭಗಳಲ್ಲಿ, ಅಧಿನಿಯಮ ಮತ್ತು ನಿಯಮಗಳ ಹಾಗೂ ನಿಯಮಗಳಲ್ಲಿರುವ ಇತರ ಉಪಬಂಧಗಳ ಯೋಜನೆಯನ್ನು ಗಮನದಲ್ಲಿರಿಸಿಕೊಂಡು, 66 " ( 2) (ಬಿ) ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅಗತ್ಯತೆಗಳನ್ನು " ಎಂಬುದಾಗಿ ಅ ಓದಲು 4 ( 3) ನೇ ನಿಯಮದಲ್ಲಿನ (ಬಿ) ಅಕ್ಷರವನ್ನು ಓದುವುದು ಅವಶ್ಯಕವಾಗಿದೆ ಎಂದು ವಾದಿಸಿದ್ದಾರೆ.ಹೀಗೆ, (ಬಿ) ಅಕ್ಷರವನ್ನು ನಿರ್ಲಕ್ಷ್ಯದಿಂದ ಮತ್ತು ಕಣ್ತಪ್ಪಿನಿಂದ " 2 ನೇ ಉಪ-ನಿಯಮ " ಪದಗಳ ನಂತರ 4 ( 3) ನೇ ನಿಯಮದ ಮೊದಲ ಸಾಲಿನಲ್ಲಿ ಬಿಟ್ಟುಬಿಡಲಾಗಿದೆ ಎಂಬುದು ಎದುರುದಾರರ ನಿರ್ದಿಷ್ಟ ವಾದವಾಗಿದೆ.ಇನ್ನೊಂದು ರೀತಿಯಲ್ಲಿ, ಅಂತರ್ಗತ ವಿಷಯದ ತತ್ವವನ್ನು ಅನ್ವಯಿಸಿ 4 ( 3) ನೇ ನಿಯಮದ ಮೊದಲ ಸಾಲಿನಲ್ಲಿ ' ಬಿ ' ಅಕ್ಷರವನ್ನು ಓದಬೇಕೆಂಬುದು ಎದುರುದಾರರ ವಾದವಾಗಿದೆ.

38. ಶಾಸನಗಳ ಅರ್ಥವಿವರಣೆಯ ಸಂಬಂಧದಲ್ಲಿ ಅಂತರ್ಗತ ವಿಷಯದ ಈ ತತ್ವವನ್ನು ಅನ್ವಯಿಸಲು ಅವಶ್ಯಕತೆಯನ್ನು ನಿರ್ಬಂಧಿಸುವ ಮೂಲಕ, ಸಮರ್ಥಿಸಲಾಗುವ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ

ಹಾಗೂ ಅಸಾಧಾರಣ/ತಪ್ಪಿಸಲಾಗದ ಸಂದರ್ಭಗಳಲ್ಲಿ ಮಾತ್ರ ನ್ಯಾಯಾಲಯವು ಸದರಿ ತತ್ವವನ್ನು ಅನ್ವಯಿಸುತ್ತದೆ ಎಂಬುದು ಇತ್ಯರ್ಥಗೊಂಡ ವಿಷಯವಾಗಿದೆ.ಶಾಸನ ರಚಿಸುವುದು ಮತ್ತು ಉಪಬಂಧಕ್ಕೆ ಪದಗಳನ್ನು ಸೇರಿಸುವುದು/ತೆಗೆದುಹಾಕುವುದು ನ್ಯಾಯಾಲಯಗಳ ಕೆಲಸವಲ್ಲಿ ಮತ್ತು ನ್ಯಾಯಾಲಯಗಳು ಸಾಮಾನ್ಯವಾಗಿ ಶಾಸನಾತ್ಮಕ ಉಪಬಂಧಗಳನ್ನು ಅರ್ಥೈಸುವುದಕ್ಕೆ ಮಾತ್ರವೇ ಅಧಿಕಾರ ಹೊಂದಿರುತ್ತವೆ ಎಂಬುದು ಸಹ ತತ್ಸಮಾನವಾಗಿ ಇತ್ಯರ್ಥಗೊಂಡ ವಿಷಯವಾಗಿದೆ.ಅಂತರ್ಗತ ವಿಷಯದ ತತ್ವಗಳನ್ನು ಅನ್ವಯಿಸುವ ಸುಸ್ಪಷ್ಟ ಮಾನದಂಡಗಳು ಮತ್ತು ಪರಿಮಿತಿಗಳನ್ನು, ಮುಂದಿನ ತೀರ್ಪುಗಳನ್ನು ಒಳಗೊಂಡಂತೆ ಸರ್ವೋಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳಲ್ಲಿ ವಿಧಿಸಲಾಗಿದೆ:

(i) ಪದ್ಮ ಸುಂದರ ರಾವ್ ವಿರುದ್ಧ ತಮಿಳುನಾಡು ರಾಜ್ಯ 10

(ii) ಶಿವ ಶಕ್ತಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ವಿರುದ್ಧ ಸ್ವರಾಜ್ ಡೆವಲಪರ್ " 11

(iii) ಭಾರತ್ ಅಲ್ಯುಮಿನಿಯಂ ಕಂಪನಿ ವಿರುದ್ಧ ಕೈಸರ್ ಅಲ್ಯುಮಿನಿಯಂ ಟೆಕ್ನಿಕಲ್ ಸರ್ವೀಸಸ್ ಇಂಕ್ 12 2

39. ಇದಲ್ಲದೆ, ಜಾರ್ಖಂಡ್ ರಾಜ್ಯ ಮತ್ತು ಇತರರು -ವಿರುದ್ಧ ಗೋವಿಂದ್ ಸಿಂಗ್ 13 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಚ ಅಭಿಪ್ರಾಯಪಟ್ಟಿದೆ:

21. ವ್ಯಾಖ್ಯಾನದ ಎರಡು ತತ್ವಗಳಲ್ಲಿ ಅಂತರ್ಗತ ವಿಷಯಕ್ಕೆ ಸಂಬಂಧಿಸಿದ ಒಂದು ತತ್ವ ಮತ್ತು ಇಡಿಯಾಗಿ ಶಾಸನಕ್ಕೆ ಸಂಬಂಧಿಸಿದ ಮತ್ತೊಂದು ತತ್ವ ಇವೆರಡೂ ಇತ್ಯರ್ಥಗೊಂಡ ತತ್ವಗಳೆಂಬುದು ಕಂಡುಬರುತ್ತದೆ.ಮೊದಲನೇ ತತ್ವದ ಮೇರೆಗೆ, ಸ್ಪಷ್ಟ ಅವಶ್ಯಕತೆಯ ಸಂದರ್ಭದ ಮತ್ತು ಶಾಸನದ ವ್ಯಾಪ್ತಿಯಲ್ಲೇ ಅದಕ್ಕೆ ಕಾರಣ ಕಂಡುಬಂದ ಹೊರತು, ನ್ಯಾಯಾಲಯವು ಅಂತರ್ಗತ ವಿಷಯಕ್ಕೆ ಒತ್ತು ನೀಡಲಾಗುವುದಿಲ್ಲವಾದರೂ, ಅದೇ ಸಮಯದಲ್ಲಿ, ಅ ಂ ತರ್ಗತ ವಿಷಯವನ್ನು ಸಿದ್ಧ ಮಾದರಿಯಲ್ಲಿ ತೀರ್ಮಾನಿಸಲಾಗುವುದಿಲ್ಲವಾದ್ದರಿಂದ ಮತ್ತು ಆ ಉದ್ದೇಶಕ್ಕಾಗಿ, ಶಾಸನದ ಎಲ್ಲಾ ಭಾಗಗಳನ್ನು ಅಥವಾ ಪ್ರಕರಣವನ್ನು ಒಟ್ಟಿಗೆ ಅರ್ಥೈಸಬೇಕಾಗುತ್ತದೆ ಮತ್ತು ನಿರ್ದಿಷ್ಟ ಉಪಬಂಧವನ್ನು ಕಾರಗತಗೊಳಿಸಬೇಕಾದ ವ್ಯಾಖ್ಯಾನವು ಇಡೀ ಶಾಸನವನ್ನು ಸುಸಂಗತ ಅಧಿನಿಯಮಿತಿಯನ್ನಾಗಿಸುವಂತಾಗಲು, ಪ್ರಕರಣದ ಪ್ರತಿಯೊಂದು ಖಂಡವನ್ನು ಮತ್ತು ಅದರ ಇತರ ಖಂಡಗಳನ್ನು, ಸಂದರ್ಭಕ್ಕೆ ಅನುಗುಣವಾಗಿ ಅರ್ಥೈಸಬೇಕಾಗುತ್ತದೆ.ಶಾಸಕಾಂಗವು ಉದ್ದೇಶಿಸಿರದ ವ್ಯಕ್ತವಾಗಿ ಅಸಂಗತ ಮತ್ತು ಅಸಂ ಸ ಂ ಬದ್ಧ ಫಲಿತಾಂಶಗಳಿಗೆ ದಾರಿ ಮಾಡಿಕೊಡುವ ನಿರ್ದಿಷ್ಟ ಖಂಡದ ಅಕ್ಷರಶಃ ವ್ಯಾಖ್ಯಾನದಲ್ಲಿ ಇದು ಹೆಚ್ಚು ಅನ್ವಯವಾಗುತ್ತದೆ.ಅರ್ಟೆಮಿಯೊ -ವಿರುದ್ಧ-ಪ್ರೊಕೋಪಿ, 1966 ( 1) ಕ್ಯುಬಿ 878 ಮೊಕದ್ದಮೆಯಲ್ಲಿ, ಡನಕ್ವರ್ಟ್ಸ್ ಎಲ್. ಜೆ. ಅವರು, " ಕೆಲವು ಇತರ ವ್ಯಾಖ್ಯಾನಗಳು ಲಭ್ಯವಿರದಿದ್ದರೆ, ಅನ್ಯಾಯದ ಫಲಿತಾಂಶವನ್ನುಂಟು ಮಾಡುವ ಉದ್ದೇಶವನ್ನು ಶಾಸನಕ್ಕೆ ಆರೋಪಿಸಲಾಗುವುದಿಲ್ಲ "; ಪದಗಳನ್ನು ಅಕ್ಷರಶಃ ಅನ್ವಯಿಸುವಲ್ಲಿ, ' ಶಾಸಕಾಂಗದ ಸಹಜ ಉದ್ದೇಶವನ್ನು ವಿಫಲಗೊಳಿಸುತ್ತದೆ "; ಹಾಗೂ ಸಹಜ ಉದ್ದೇಶವನ್ನು ಸಾಧಿಸಲು ಮತ್ತು ತಾರ್ಕಿಕ ವ್ಯಾಖ್ಯಾನವನ್ನು ಮುಂದಿಡಲು ನಾವು " ಪದಗಳನ್ನು ಸ್ವಲ್ಪಮಟ್ಟಿಗೆ ಮೀರಬೇಕಾಗುತ್ತದೆ " ಎಂದು ಹೇಳಿದ್ದಾರೆ.(ಲ್ಯೂಕ್ -ವಿರುದ್ಧ ಎಐಆರ್ 1966 ಎಸಿ 557, ಪುಟ 577 ರ ಪ್ರಕಾರ) ಅವರು " ನಮ್ಮ ಕರಡು ರಚನೆಯ ಗುಣಮಟ್ಟವು ವಿರಳವಾಗಿ ಉದ್ಭವಿಸುವಂಥಹುದಾಗಿದ್ದರೂ, ಇದು ಹೊಸ ಸಮಸ್ಯೆ ಏನೂ ಅಲ್ಲ " ಎಂದೂ ಸಹ ಅಭಿಪ್ರಾಯಪಟ್ಟಿದ್ದಾರೆ.

22. ಹಾಗಿದ್ದರೆ, ಕಾನೂನಿನ ಪದಗಳು ವಿರಳವಾಗಿ ಸಂಭವಿಸುವ ಅನಾನುಕೂಲತೆಗೆ ಅನ್ವಯಿಸುವಂತಿದ್ದರೆ, ಆಗಾಗ್ಗೆ ಗ ಸಂಭವಿಸುವಂಥವುಗಳಿಗೆ, ಅದು ಅಂತರ್ಗತ ವಿಷಯವೆಂದು ಹೇಳುವ ಮೂಲಕ, ಪದಗಳು ಸಾಧಿಸಲಾಗುವುದಕ್ಕಿಂತ ಹೆಚ್ಚು ಚ ಅವುಗಳನ್ನು ಲಂಬಿಸದಿರುವುದು ಸಕಾರಣವಾಗುವುದು, ಹಾಗೂ ಕಾನೂನು ಉದ್ದೇಶಿಸಿರದ ` ಪದೇ ಪದೇ ಬರುವ ಮೊಕದ್ದಮೆಗಳಿಗೆ ಕಾನೂನುಗಳು ಅನ್ವಯವಾಗುತ್ತವೆ ' (quae frequentius accidunt) ಎಂಬುದು ಸತ್ಯ. 11 " ಆದರೆ ", ಇನ್ನೊಂದೆಡೆ, ' ಕಾನೂನಿನ ಪದಗಳು, ವಿರಳವಾಗಿ ಸಂಭವಿಸುವ ಅನಾನುಕೂಲತೆಗೆ ಸಾಕಷ್ಟು ಅನ್ವಯವಾಗುತ್ತಿರುವಾಗ, ಅವುಗಳನ್ನು ಅದಕ್ಕೆ ಅನ್ವಯಿಸಬಾರದು, ಅಷ್ಟೇ ಅಲ್ಲದೆ, ಪದೇ ಪದೇ ಹಾಗಾಗುತ್ತಿದ್ದರೆ, ಅದು ವಿರಳವಾಗಿ ಸಂಭವಿಸುವುದೇ ಕಾರಣ " (ನೋಡಿ:ಫೆಂಟನ್ ವಿರುದ್ಧ ಹ್ಯಾಂಪ್ಟನ್, 11 ಎಂಪಿಸಿ 345), ಸ್ಪಷ್ಟ ಅವಶ್ಯಕತೆ ಇರುವ ಕೆಲವು ಮೊಕದ್ದಮೆಗಳನ್ನುಳಿದು, ಅಂತರ್ಗತ ವಿಷಯವನ್ನು ಅರ್ಥವಿವರಣೆಯ ಮೂಲಕ ಸೃಜಿಸಬಾರದಿತ್ತು.ಆದಾಗ್ಯೂ, ಶಾಸಕಾಂಗದ ನಿರ್ಲಕ್ಷತೆಯ ಮೂಲಕವಾಗಲಿ ಅಥವಾ ನಿರ್ದಿಷ್ಟ ಮೊಕದ್ದಮೆಗೆ ಉಪಬಂಧ ಕಲ್ಪಿಸಿದಿದ್ದಲ್ಲಿ, ಅಂಥ ಶಾಸನಕ್ಕೆ ಮೊದಲು ಅದು ಅಸ್ತಿತ್ವದಲ್ಲಿದ್ದಂತೆ ಕಾನೂನಿನಗೆ ಅನುಗುಣವಾಗಿ ಅದನ್ನು ವಿಲೆ ಮಾಡಬೇಕು ಎಂಬ ತತ್ವದ ಆಧಾರದ ಮೇಲಾಗಲಿ, ಅಂತರ್ಗತ ವಿಷಯವು ವಾಸ್ತವವಾಗಿ ಉಂಟಾಗಿದ್ದಲ್ಲಿ, ಹಾಗೆ ಉಪಬಂಧಿಸದೆ ಉಳಿದ ನಿರ್ದಿಷ್ಟ ಮೊಕದ್ದಮೆಯನ್ನು, ಅಂಥ ಶಾಸನಕ್ಕೆ ಮೊದಲು ಅಸ್ತಿತ್ವದಲ್ಲಿದ್ದಂಥ ಕಾನೂನಿಗೆ ಅನುಗುಣವಾಗಿ ವಿಲೆ ಮಾಡಬೇಕು ಅಂತರ್ಗತ ವಿಷಯ ಮತ್ತು ಮರೆತುಹೋದ ಮೊಕದ್ದಮೆಯನ್ನು ಸಾಮಾನ್ಯ ಕಾನೂನಿನ ವಿಲೆಗೆ ಬಿಟ್ಟುಬಿಡಬೇಕು ಎಂಬುದು ನಿಯಮವಾಗಿದೆ; " ಅಂತರ್ಗತ ವಿಷಯವನ್ನು " 1 ಕುರಿತು, ಜೋನ್ಸ್ -ವಿರುದ್ಧ-ಸ್ಮಾರ್ಟ್, 1 ಟಿಆರ್ 52 ಮೊಕದ್ದಮೆಯಲ್ಲಿ, ನ್ಯಾಯಮೂರ್ತಿ ಬೂಲರ್ ಅವರು, " ಯಾವುದೇ ಸಂದರ್ಭದಲ್ಲೂ, ನ್ಯಾಯಾಲಯವು ಕಾನೂನು ರಚಿಸಬೇಕೆಂಬುದಕ್ಕೆ ಒತ್ತು ನೀಡಲಾಗುವುದಿಲ್ಲ " ಎಂದು ಅಭಿಪ್ರಾಯಪಟ್ಟಿದ್ದಾರೆ. "

40. ಮೇಲೆ ಉಲ್ಲೇಖಿಸಿದ ಕಾನೂನಿನ ಇತ್ಯರ್ಥಗೊಂಡ ಅಭಿಪ್ರಾಯದ ಹಿನ್ನೆಲೆಯಲ್ಲಿ, ಶಾಸನದ ಪದಗಳು ಸ್ಪಷ್ಟವಾಗಿದ್ದಾಗ ಮತ್ತು ಸಂಶಯಕ್ಕೆಡೆ ಮಾಡಿಕೊಡದಂತಿದ್ದಾಗ ಹಾಗೂ ಶಾಸಕಾಂಗವು ಉದ್ದೇಶಿಸಿರದ ಸ್ಪಷ್ಟವಾಗಿ ಅಸಂಗತ ಮತ್ತು ಅಸಂಬದ್ಧ ಫಲಿತಾಂಶಗಳಿಗೆ ದಾರಿ ಮಾಡಿಕೊಡದಿರುವಂತಿದ್ದಾಗ, ನ್ಯಾಯಾಲಯವು ಯಾವುದೇ ಹೊಸ ಪರಿಭಾಷೆಗಳನ್ನು ಅಥವಾ ಶಾಸನದಲ್ಲಿನ ಅಧಿಕಾರವನ್ನು ಓದಬೇಕಿರುವುದಿಲ್ಲ ಎಂಬುದು ಸ್ಪಷ್ಟ.ಈ ಸಂದರ್ಭಗಳ ಮೇರೆಗೆ, ಅಂತರ್ಗತ ವಿಷಯದ ತತ್ವಗಳನ್ನು ಅನ್ವಯಿಸುವ ಮೂಲಕ ' 2006 ರ ಸದರಿ ನಿಯಮಗಳ 4 ( 3) ನೇ ನಿಯಮದಲ್ಲಿ ಕಂಡುಬರುವ ( 2) ನೇ ಉಪ-ನಿಯಮ ಎಂಬ ಪದಗಳ ನಂತರ ' ಬಿ ' ಪದಕ್ಕೆ ಒತ್ತು ನೀಡಬೇಕೆಂಬ ಎದುರುದಾರರ ವಾದವನ್ನು ಒಪ್ಪುವುದು ಸಾಧ್ಯವಿಲ್ಲ.ತದನುಸಾರವಾಗಿ, 3 ನೇ ವಿವಾದಾಂಶಕ್ಕೆ ಎದುರುದಾರರ ವಿರುದ್ಧ ನಕಾರಾತ್ಮಕವಾಗಿ ಉತ್ತರಿಸಲಾಗಿದ್ದು, ಈ ಸಂಬಂಧದಲ್ಲಿನ ಅವರ ವಾದವನ್ನು ಈ ಮೂಲಕ ತಳ್ಳಿಹಾಕಲಾಗಿದೆ.

41. ವಿವಾದಾಂಶಸಂಖ್ಯೆ:(iv)

ಅಧಿನಿಯಮದ 39 ( 2) ನೇ ಪ್ರಕರಣದ ಅಡಿಯಲ್ಲಿ ಪದ್ಯಾಲೋಚಿಸಿದಂತೆ, ಒಂದು ತಿಂಗಳ ಪೂರ್ವಭಾವಿ ನೋಟೀಸಿನ ಮೂಲಕದಿನಾಂಕ: 03.07.2015 ರ ಅನುಬಂಧ-ಹೆಚ್ನಲ್ಲಿನ ಪ್ರಶ್ನಿತ ಆದೇಶವನ್ನು ನೀಡಿರಲಿಲ್ಲ ಎಂಬುದು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಅದನ್ನು ಪ್ರಶ್ನಿಸಲು ಮುಖ್ಯ ಕಾರಣವಾಗಿತ್ತು.ಪ್ರಶ್ನಿತ ಆದೇಶದ 6 ರಿಂದ 8 ರವರೆಗಿನ ಕಂಡಿಕೆಗಳಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರು ನಿರ್ದಿಷ್ಟವಾಗಿ ತಿಳಿಸಿರುವ

ಈ ವಾದವನ್ನು, ಈ ಸಂಬಂಧದಲ್ಲಿ ಅಪೀಲುದಾರ ವಿರುದ್ಧದ ಸ್ಪಷ್ಟ ನಿರ್ಣಯವನ್ನು ದಾಖಲಿಸಿ ಸರಿಯಾಗಿಯೇ ತಳ್ಳಿಹಾಕಲಾಗಿದೆ.ಮೇಲಿನ ಅಪೀಲಿನಲ್ಲಿ ಹಸ್ತಕ್ಷೇಪವನ್ನು ಸಮರ್ಥಿಸುವ ಸಲುವಾಗಿ ಸದರಿ ನಿರ್ಣಯದಲ್ಲಿ ಯಾವುದೇ ಕಾನೂನುಬಾಹಿರತೆ ಅಥವಾ ತರ್ಕವಿರುದ್ಧವಾದುದೇನೂ ನಮಗೆ ಕಂಡುಬಂದಿರುವುದಿಲ್ಲ.ಮಾನ್ಯ ಏಕಪೀಠ ನ್ಯಾಯಾಧೀಶರು, ದಾಖಲೆಯಲ್ಲಿರುವ ಅವಿವಾದಿತ ಸಾಕ್ಷ್ಯದೊಂದಿಗೆ, ಅಧಿನಿಯಮದ 39 ( 2) ನೇ ಪ್ರಕರಣದಲ್ಲಿರುವ ಉಪಬಂಧಗಳನ್ನು ಗಮನಕ್ಕೆ ತೆಗೆದುಕೊಂಡು ನಿರ್ಣಯಕ್ಕೆ ಬಂದಿರುವುದನ್ನು ಸಂಪೂರ್ಣವಾಗಿ ಸಮರ್ಥಿಸಿಕೊಂಡಿದ್ದಾರೆ.ಅಪೀಲುದಾರನ ಪರವಾಗಿ ಮಂಡಿಸಿದ ಸದರಿ ವಾದವು ತಳ್ಳಿಹಾಕಲು ಯೋಗ್ಯವಾಗಿದೆ.ತದನುಸಾರವಾಗಿ,(iv) ನೇ ವಿವಾದಾಂಶಕ್ಕೆ ಅಪೀಲುದಾರರ ವಿರುದ್ಧ ಉತ್ತರಿಸಲಾಗಿದೆ.

42. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಮೇಲೆ ಹೇಳಿದ ಅಂಶಗಳನ್ನಾಧರಿಸಿ, ನಾವು ಈ ಮೂಲಕ ಈ ಕೆಳಗಿನಂತೆ ನಮ್ಮ ನಿರ್ಣಯಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತೇವೆ:

(1) ಕರ್ನಾಟಕ ಪದವಿ-ಪೂರ್ವ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ ನಿಯಮಗಳು, 2006 ರ 4 ( 2) ( ಎ) ನೇ ನಿಯಮವು, ಭಾರತ ಸಂವಿಧಾನವನ್ನು ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವುದಿಲ್ಲ.

(ii) 4 ( 2) ( ಎ) ನಿಯಮದ ಅಡಿಯಲ್ಲಿ ಪರ್ಯಾಲೋಚಿಸಿದಂತೆ 25,000 ಚದರ ಅಡಿ ಭೂಮಿಯನ್ನು ಒದಗಿಸುವ ಕನಿಷ್ಠ ಅಗತ್ಯತೆಯು, ವಿಭಾಗಗಳ ಸಂಖ್ಯೆ ಎಷ್ಟೇ ಇರಲಿ ಎಲ್ಲಾ ಪದವಿ-ಪೂರ್ವ ಕಾಲೇಜುಗಳಿಗೆ ಅನ್ವಯವಾಗುತ್ತದೆ.

(iii) ಅಂತರ್ಗತ ವಿಷಯದ ತತ್ವಗಳು, 2006 ರ ಸದರಿ ನಿಯಮಗಳ 4 ( 3) ನೇ ನಿಯಮಕ್ಕೆ ಅನ್ವಯವಾಗುವುದಿಲ್ಲ.

(iv) 3 ನೇ ಎದುರುದಾರರು ಹೊರಡಿಸಿದದಿನಾಂಕ: 03.07.2015 ರ ಅನುಬಂಧ-ಹೆಚ್ಚನ್ನು ಪ್ರಶ್ನಿಸಿರುವುದನ್ನು ತಳ್ಳಿಹಾಕಿ ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ಆದೇಶದಲ್ಲಿ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದನ್ನು ಸಮರ್ಥಿಸುವುದಿಲ್ಲ.

43. ಮೇಲೆ ದಾಖಲಿಸಿದ ನಿರ್ಣಯಗಳ ಹಿನ್ನೆಲೆಯಲ್ಲಿ, ಮೇಲಿನ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಯಿಲ್ಲ ಮತ್ತು ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ.